
# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸೆಪ್ಟಂಬರ್ 2014
ಬೆಲೆ ರೂ. 1

# ಡಾ. ಯು.ಆರ್. ಅನಂತಮೂರ್ತಿ

**ಕರ್ನಾಟಕದ ಜೀವ ಚೈತನ್ಯವನ್ನು**
**ಕ್ರಿಯಾಶೀಲಗೊಳಿಸುತ್ತಲೇ ಬದುಕಿದ ಮಹಾನುಭಾವ**

**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ:
9958697823

**ಉಪಾಧ್ಯಕ್ಷರು**
ಬಸವರಾಜು ಬಿ.ಕೆ.:
9810391608
ಆಶಾಲತಾ ಎಂ.:
9891249149

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ:
9811325440

**ಕೋಶಾಧಿಕಾರಿ**
ಡಾ. ಅವನೀಂದ್ರನಾಥ್ ರಾವ್
9868123382

**ಜಂಟಿ ಕಾರ್ಯದರ್ಶಿಗಳು**
ಎಸ್.ಸಿ. ಹೇಮಲತ:
9971121636
ಟಿ.ಎಂ. ಮೈಲಾರಪ್ಪ:
9868347461

**ಸಮಿತಿ ಸದಸ್ಯರು**
ಆಂಜನಿ ಗೌಡ:
9811165354
ರಾಧಾಕೃಷ್ಣ:
9818252183
ಪೂರ್ಣಿಮಾ ಗೌಡ:
8860916899
ವಿ.ವಿ.ಬಿರಾದಾರ:
9873005409
ಪಿ.ಸಿ.ಶ್ರೀನಿವಾಸ್:
9868170790
ಆನಂದ ಮುರಗೋಡ:
9312931233
ಆಶಾ ಶ್ಯಾಮಸುಂದರ್:
9871256177
ಬಸವರಾಜ ಮೇಟಿ:
9810282951
ಟಿ.ಪಿ. ಬೆಳ್ಳಿಯಪ್ಪ:
9654555795
ಕುಸುಮಾ ಪಿ. ನಂದರಗಿ
9868393955

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಅರವಿಂದ ಕೌಜಲಗಿ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 24 ಸಂಚಿಕೆ 12
ಸೆಪ್ಟಂಬರ್ 2014, ಬೆಲೆ ರೂ. 1

## ನೇರ ಮಾತು

"ಈ ಸಾಂಸ್ಕೃತಿಕ ಸಮುಚ್ಚಯ ನಮ್ಮ ನಿಮ್ಮೆಲ್ಲರ 'ಮಹಾಮನೆ'. ಈ ಮಹಾಮನೆಯೆಂಬ ಅನುಭವ ಮಂಟಪದಲ್ಲಿ ನಾವು, ನಮ್ಮ ಮುಂದಿನ ತಲೆಮಾರು ಕನ್ನಡ ಸಂಸ್ಕೃತಿಯನ್ನು ರಾಷ್ಟ್ರದ ರಾಜಧಾನಿಯಲ್ಲಿ ಬಿತ್ತರಿಸುವ ಮಹತ್ವದ ಹೊಣೆ ಹೊರಬೇಕಾಗಿದೆ" ಎಂದು 2005ರಲ್ಲಿ ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ಉದ್ಘಾಟನಾ ಸಮಾರಂಭದ ಸ್ಮರಣ ಸಂಚಿಕೆಯ ಸಂಪಾದಕರ ನುಡಿಯಲ್ಲಿ ಶ್ರೀಮತಿ ಉಷಾ ಭರತಾದ್ರಿಯವರು ದೆಹಲಿಯ ಕನ್ನಡಿಗರು ರಾಜಧಾನಿಯಲ್ಲಿ ಏನು ಮಾಡಬೇಕೆಂಬುದರ ಒಂದು ನಿರ್ದಿಷ್ಟವಾದ ಕಲ್ಪನೆಯನ್ನು ಬಿಚ್ಚಿಟ್ಟಿದ್ದರು. ವಿಚಾರವಂತ, ವಿದ್ಯಾವಂತ ಕನ್ನಡಿಗರಿಗೆ ಮಾತ್ರವಲ್ಲ, ಕೇವಲ ಕನ್ನಡ ಓದಲು ತಿಳಿದಿರುವ ಯಾವುದೇ ಕನ್ನಡಿಗನಿಗೆ ಈ 'ಮಾತು' ಒಂದೇ ಓದಿನಲ್ಲಿ ಅರ್ಥವಾಗುವಂತಹದ್ದು. ಇದನ್ನು ಅರ್ಥಮಾಡಿಕೊಂಡ ಎಲ್ಲಾ ದೆಹಲಿಯ ಕನ್ನಡಿಗರು ಸಮಾನ ಮನಸ್ಕರಾಗಿ ದೆಹಲಿಯಲ್ಲಿ ಒಟ್ಟು ಸೇರಿ ಕನ್ನಡ ಕೆಲಸ ಮಾಡಿದ್ದಲ್ಲಿ ನಮ್ಮ ಕಲ್ಪನೆಯ ಎಲ್ಲಾ ಕನಸುಗಳನ್ನು ನನಸಾಗಿಸುವುದು ಕಷ್ಟಸಾಧ್ಯವಲ್ಲ. ಅದು ಅತೀ ಸುಲಭ. ದೆಹಲಿ ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಪೀಠದ ಪ್ರಾರಂಭ, ದೆಹಲಿ ವಿಶ್ವವಿದ್ಯಾಲಯ ಮತ್ತು ಬನಾರಸ್ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗವನ್ನು ಪುನರಾರಂಭ ಮಾಡಬೇಕೆಂಬ ನಮ್ಮ ಬೇಡಿಕೆ, ದಿಲ್ಲಿ ಹಾಟ್‌ನಲ್ಲಿ ಕರ್ನಾಟಕದ ತಿಂಡಿ-ತಿನಿಸುಗಳ ಮಳಿಗೆ, ಸಂಘದ ಮುಂಭಾಗದ ಮೆಟ್ರೋ ನಿಲ್ದಾಣಕ್ಕೆ ದೆಹಲಿ ಕರ್ನಾಟಕ ಸಂಘದ ಹೆಸರು, ರಾಜಧಾನಿ ದೆಹಲಿಯಲ್ಲಿ ಸಾಹಿತ್ಯ ಪರಿಷತ್ತಿನ ಕನ್ನಡ ಸಾಹಿತ್ಯ ಸಮ್ಮೇಳನ ಆಚರಿಸಬೇಕೆಂಬ ಕಲ್ಪನೆ ಇವೆಲ್ಲವೂ ಕರ್ನಾಟಕದ ಸಂಸ್ಕೃತಿಯನ್ನು ರಾಷ್ಟ್ರದ ರಾಜಧಾನಿಯಲ್ಲಿ ಬಿತ್ತರಿಸುವ ಪ್ರಯತ್ನಗಳಾಗಿವೆ.

ಇದೇ ಆಗಸ್ಟ್ 17ರಂದು ಸಂಘದ ವಾರ್ಷಿಕ ಮಹಾಸಭೆ ಕೆಲವೊಂದು ಗಂಭೀರವಾದ ಚರ್ಚೆಯೊಂದಿಗೆ ಸಾಂಗವಾಗಿ ನಡೆದಿದೆ. ಸದಸ್ಯರೆಲ್ಲರೂ ಈ ಹಿಂದಿನ ಮಧ್ಯಾವಧಿ ವಾರ್ಷಿಕ ಸಭೆಗಳಲ್ಲಿ ಭಾಗವಹಿಸಿರುವುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದೀರಿ. ಬಹಳಷ್ಟು ಹಿರಿಯ ಸದಸ್ಯರು ಪಾಲ್ಗೊಂಡಿರುವುದಲ್ಲದೇ ಬಹುತೇಕ ಮಂದಿ ಕ್ರಿಯಾಶೀಲರಾಗಿ ಚರ್ಚೆಯಲ್ಲಿ ಭಾಗವಹಿಸಿ ಸಭೆಯ ಮಹತ್ವವನ್ನು ತೋರಿಸಿಕೊಟ್ಟಿದ್ದೀರಿ. ಇದುವರೆಗೆ ನಡೆಸಿದ ಕಾರ್ಯಕ್ರಮಗಳ ಕುರಿತು ಪ್ರಶಂಸೆ, ಮುಂದೆ ಮಾಡಬೇಕಾದ ಕೆಲಸಗಳ ಕುರಿತು ಪ್ರೋತ್ಸಾಹದ ನುಡಿಗಳು ಕಾರ್ಯಕಾರಿ ಸಮಿತಿಯ ಎಲ್ಲರ ಹುಮ್ಮಸ್ಸನ್ನು ಹೆಚ್ಚಿಸಿದೆ. ಸಂಘದ ಉತ್ತಮ ಕಾರ್ಯಗಳಿಗೆ ನಿಮ್ಮೆಲ್ಲರ ಸಹಕಾರವಿದ್ದಾಗ ನಡೆಯುವ ದಾರಿ ಸುಗಮವಾಗುವುದು. ಅ

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*

## ಮುನ್ನೋಟ

ಆಗಸ್ಟ್ 17ರಂದು ನಡೆದ ಸಂಘದ ವಾರ್ಷಿಕ ಮಹಾಸಭೆಗೆ ಈ ಬಾರಿ ಅತ್ಯಂತ ಹೆಚ್ಚು ಸದಸ್ಯರು ಬಂದು ಭಾಗವಹಿಸಿರುವುದು ನಮಗೆ ಮುಂದೆ ಕೆಲಸ ಮಾಡಲು ಹೆಚ್ಚು ಹುರುಪು ತಂದಿದೆ. ಮುಖ್ಯವಾಗಿ ಈ ವರ್ಷದ ವಾರ್ಷಿಕ ಮಹಾಸಭೆಯು ಅತ್ಯಂತ ಶಾಂತಿಯುತವಾಗಿ ನಡೆಯಿತು. ಇದೆಲ್ಲವನ್ನು ಗಮನಿಸಿದಾಗ ನಮ್ಮ ಈ ವರ್ಷದ ಕೆಲಸ ಕಾರ್ಯಗಳು, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಗಳು ನಮ್ಮ ಸದಸ್ಯರಿಗೆ ಮೆಚ್ಚುಗೆಯಾಗಿದೆ ಎಂದುಕೊಂಡಿದ್ದೇವೆ. ಇದೀಗ ಸಮಯಕ್ಕೆ ಸರಿಯಾಗಿ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಮತ್ತು ಎಲ್ಲಾ ಆಟೋಟ ಸ್ಪರ್ಧೆಗಳು ಆಯೋಜನೆಯಾಗುತ್ತಿದ್ದು, ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು. 'ಸದಸ್ಯರ ಮನೆ ಬಾಗಿಲಿಗೆ ಸಂಘ' ಕಾರ್ಯಕ್ರಮದ ಅಂಗವಾಗಿ ಮುಂದಿನ ಕಾರ್ಯಕ್ರಮಗಳು ಅಶೋಕ್ ವಿಹಾರ್ ಹಾಗೂ ನೋಯ್ಡಾದ ಜೆ.ಎಸ್.ಎಸ್. ನಲ್ಲಿ ನಡೆಸುವ ಬಗ್ಗೆ ಯೋಚಿಸಲಾಗಿದೆ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

ದೆಹಲಿ ಕರ್ನಾಟಕ ಸಂಘದಲ್ಲಿ

# ತಿಂಗಳ ಕಾರ್ಯಕ್ರಮ

**7 ಸೆಪ್ಟಂಬರ್ 2014 ಭಾನುವಾರ ಸಂಜೆ : 4.00 ಗಂಟೆಗೆ**

ಸ್ಥಳ : ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಸಭಾ ಭವನ

**ಸಾಹಿತ್ಯ ವೈವಿಧ್ಯ : ಒಂದು ನೆನಪು-ದಿ. ಡಾ. ಜಿ.ಎ. ಬಿರಾದಾರ, ಸಂಶೋಧನೆ-ಚರಿತ್ರೆ-ಸಾಹಿತ್ಯ**

**7 ಸೆಪ್ಟಂಬರ್ 2014 ಭಾನುವಾರ ಸಂಜೆ : 5.00 ಗಂಟೆಗೆ**

ಸಂಘದ ತಿಂಗಳಿಗೊಂದು ನಾಟಕ ಪ್ರಥಮ ಪ್ರಯೋಗ ಶ್ರೀ ಟಿ.ಎಂ. ಮೈಲಾರಪ್ಪ ನಿರ್ದೇಶನದ ನಾಟಕ : ಮುದ್ದಣ್ಣನ ಪ್ರಮೋಷನ್ ಪ್ರಸಂಗ, ಪ್ರಸ್ತುತಿ : ದೆಹಲಿ ಫ್ರೆಂಡ್ಸ್, ನವದೆಹಲಿ

**20,21,27 ಮತ್ತು 2,3,4 ಹಾಗು 5 ಸೆಪ್ಟಂಬರ್ ಮತ್ತು ಅಕ್ಟೋಬರ್ 2014**

ದೆಹಲಿ ಕರ್ನಾಟಕ ಸಂಘವು 2014-15ನೇ ಸಾಲಿನ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಹಾಗೂ ವಿವಿಧ ಕ್ರೀಡಾ, ಸಾಂಸ್ಕೃತಿಕ ಸ್ಪರ್ಧೆಗಳನ್ನು ವಾರ್ಷಿಕೋತ್ಸವದ ಅಂಗವಾಗಿ ಸೆಪ್ಟಂಬರ್ 20, 21, 27 ಮತ್ತು ಅಕ್ಟೋಬರ್ 2,3,4, ಹಾಗು 5 2014ರಂದು ಆಯೋಜಿಸಿದೆ. ಸಂಘದ ಸದಸ್ಯರು ಮತ್ತು ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿ.

ಕ್ರೀಡಾ ಸ್ಪರ್ಧೆಗಳಿಗೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **15.09.2014.**

ಸ್ಥಳ : ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಹಳೇ ಕ್ಯಾಂಪಸ್.

**(ಈ ಹಿಂದೆ ಸಂಘದಿಂದ ಕಳುಹಿಸಿದ ಮಾಹಿತಿಯಂತೆ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯು ಸೆಪ್ಟಂಬರ್ 20ರ ಬದಲು 21ರಿಂದ ಪ್ರಾರಂಭಗೊಳ್ಳಲಿದೆ. ಟೆಬಲ್ ಟೆನ್ನಿಸ್, ಶಟಲ್ ಬ್ಯಾಡ್ಮಿಂಟನ್ (ಪುರುಷರು) 02.10.14ರ ಬದಲಾಗಿ ಸೆಪ್ಟಂಬರ್20ರಂದು ನಡೆಯಲಿರುವುದು ದಯವಿಟ್ಟು ಗಮನಿಸಿ)**

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ
ಭಾನುವಾರ 21 ಸೆಪ್ಟಂಬರ್ 2014ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 14 ಸೆಪ್ಟಂಬರ್ 2014ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಭೀಮ್ ಭಟ್** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ
28 ಸೆಪ್ಟಂಬರ್ 2014 ರಂದು ಸಾಯಂಕಾಲ 4 ಗಂಟೆಯಿಂದ.



## ತಿಂಗಳಿಗೊಂದು ನಾಟಕ ಪ್ರದರ್ಶಿಸಲು ತಂಡಗಳಿಗೆ ಆಹ್ವಾನ

ದೆಹಲಿ ಕರ್ನಾಟಕ ಸಂಘವು ಸಂಘದ ಸಭಾಂಗಣದಲ್ಲಿ ಇದೇ ಸೆಪ್ಟಂಬರ್ ತಿಂಗಳಿನಿಂದ ತಿಂಗಳಿಗೊಂದು ನಾಟಕವನ್ನು ಪ್ರದರ್ಶಿಸಲಿದೆ. ದೆಹಲಿಯ ಕನ್ನಡಪರ ಸಂಘಟನೆಗಳು ನಾಟಕಗಳನ್ನು ಪ್ರದರ್ಶಿಸಬಹುದು. ಈ ಮೊದಲು ಸಂಘದಲ್ಲಿ ನಾಟಕ ಪ್ರದರ್ಶಿಸಿದ ತಂಡಗಳು ಮತ್ತು ದೆಹಲಿಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವ ಸಂಘ ಸಂಸ್ಥೆಗಳು ಈ ಅವಕಾಶವನ್ನು ಉಪಯೋಗಿಸಬಹುದು. ಒಂದು ತಂಡಕ್ಕೆ ಒಂದೇ ಅವಕಾಶ ನೀಡಲಾಗುವುದು.

ನಾಟಕವನ್ನು ಪ್ರದರ್ಶಿಸಲಿಚ್ಛಿಸುವ ತಂಡಗಳು ನಾಟಕದ ಪ್ರತಿಯನ್ನು ಸಂಘದ ಕಚೇರಿಗೆ ನೀಡಬೇಕು. ನಾಟಕ ಕನ್ನಡ ಅಥವಾ ಕರ್ನಾಟಕದ ಪ್ರಮುಖ ಭಾಷೆಗಳಾದ ಕೊಡವ, ಕೊಂಕಣಿ, ತುಳು ಭಾಷೆಗಳದ್ದಾಗಿರಬೇಕು. ನಾಟಕದಲ್ಲಿ ಯಾವುದೇ ರೀತಿಯ ಅಸಂವಿಧಾನಿಕ ಶಬ್ದ ಮತ್ತು ಸಂಘ ಮತ್ತು ವ್ಯಕ್ತಿಗಳಿಗೆ ಮಾನಹಾನಿಯಾಗುವಂತಹ ಹೇಳಿಕೆಗಳ ಬಳಕೆ ಮಾಡಬಾರದು. ಪ್ರದರ್ಶನಗೊಂಡ ನಾಟಕಕ್ಕೆ ಸಂಘದ ವತಿಯಿಂದ ರೂ.25,000/- ಗೌರವಧನ ನೀಡಲಾಗುವುದು. ನಾಟಕಗಳನ್ನು ಪ್ರದರ್ಶಿಸುವ ತಂಡಗಳು 2014ರ ಸೆಪ್ಟಂಬರ್ 20ರ ಸಂಜೆ ಆರು ಗಂಟೆಯ ಒಳಗೆ ವಿವರಗಳನ್ನು ನೊಂದಾಯಿಸಬಹುದು. ನೊಂದಣಿಯಾದ ನಂತರ ನಾಟಕ ಪ್ರದರ್ಶಿಸುವ ದಿನಾಂಕಗಳನ್ನು ಸಂಘದ ಸಮಿತಿಯು ನಿರ್ಧರಿಸುವುದು ಮತ್ತು ತಂಡಗಳು ಅದಕ್ಕೆ ಬದ್ಧವಾಗಿ ನಾಟಕಗಳನ್ನು ಪ್ರದರ್ಶಿಸಬೇಕಾಗುತ್ತದೆ. ಅ

## ವಧೂ-ವರರ ಮಾಹಿತಿ

ಕರ್ನಾಟಕದಿಂದ ದೆಹಲಿಗೆ ಬಂದು ನೆಲೆನಿಂತ ಹಲವಾರು ಕನ್ನಡಿಗರು ಹತ್ತು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಲೇ ಬಂದಿರುತ್ತಾರೆ. ಇದರಲ್ಲಿ ಮುಖ್ಯವಾಗಿ ತಮ್ಮ ಮಕ್ಕಳ ವಿವಾಹದ ಕುರಿತು ಹೆಚ್ಚು ಸಮಸ್ಯೆಗಳಿಗೆ ಒಳಗಾಗುತ್ತಾರೆ. ಇದನ್ನು ಮನಗಂಡ ದೆಹಲಿ ಕರ್ನಾಟಕ ಸಂಘವು ಹುಡುಗ-ಹುಡುಗಿಯರ ಮಾಹಿತಿಯನ್ನು ಸಂಗ್ರಹಿಸುತಿದೆ.

ದೆಹಲಿಯಲ್ಲಿರುವ ಕರ್ನಾಟಕದ ಪೋಷಕರು/ಹುಡುಗ/ಹುಡುಗಿಯರು ಪ್ರತಿ ಭಾನುವಾರ ಸಂಜೆ ಸಂಘದ ಕಾರ್ಯಾಲಯಕ್ಕೆ ಬಂದು ಸಂಘದಲ್ಲಿರುವ ಮಾಹಿತಿಯನ್ನು ನೋಡಬಹುದು. ಹಾಗೂ ಮಾಹಿತಿಯನ್ನು ನೋಂದಾಯಿಸಬಹುದು. ನೋಂದಣಿ ಉಚಿತವಾಗಿರುತ್ತದೆ. ವೈವಾಹಿಕ ಸಂಬಂಧಗಳ ಕುರಿತು ಪೋಷಕರು/ಹುಡುಗ/ಹುಡುಗಿಯರು ಪರಸ್ಪರ ವ್ಯವಹರಿಸಿಕೊಳ್ಳತಕ್ಕದ್ದು. ಸಂಬಂಧಗಳ ಕುರಿತು ಸಂಘ ಯಾವುದೇ ರೀತಿಯ ವ್ಯವಹಾರ ಮಾಡುವುದಿಲ್ಲ ಮತ್ತು ಜವಾಬ್ದಾರರಾಗುವುದಿಲ್ಲ. ಅ





**ದೆಹಲಿ ಕರ್ನಾಟಕ ಸಂಘವು 2006ರಲ್ಲಿ ಡಾ. ಪುರುಷೋತ್ತಮ ಬಿಳಿಮಲೆ ಅವರ ಸಂಪಾದಕತ್ವದಲ್ಲಿ ಪ್ರಕಟಿಸಿದ ಈ ಕೃತಿ ಸಂಘದಲ್ಲಿ ಲಭ್ಯವಿದೆ. ತಾವು ಕೊಂಡು ಓದಬೇಕಾಗಿ ವಿನಂತಿ.**

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 - 011-26109615, 011-26104818

# ದೆಹಲಿ ಕರ್ನಾಟಕ ಸಂಘದಲ್ಲಿ ಸ್ವಾತಂತ್ರ್ಯ ದಿನಾಚರಣೆ



ದೆಹಲಿ ಕರ್ನಾಟಕ ಸಂಘದಲ್ಲಿ 68ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ದೆಹಲಿಯ ಹಿರಿಯ ಕನ್ನಡಿಗ ಶ್ರೀ ಎನ್.ಎ.ಮಾಧವ ಅವರು ಸಂಘದ ಆಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಸಂಘದ ಸದಸ್ಯರ ಸಮ್ಮುಖದಲ್ಲಿ ಧ್ವಜಾರೋಹಣ ಮಾಡಿದರು.


ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡುತ್ತ ನಮ್ಮ ಹಿರಿಯರ ಹೋರಾಟದ ಪ್ರಯತ್ನದ ಫಲವಾಗಿ ನಮಗೆ ಸ್ವಾತಂತ್ರ್ಯ ಸಿಕ್ಕಿದ್ದೇನೋ ನಿಜ. ಆದರೆ ಇಂದಿನ ದಿನಗಳಲ್ಲಿ ದಿನನಿತ್ಯ ನಡೆಯುತ್ತಿರುವ ಹಿಂಸೆ, ಸ್ತ್ರೀಯರ ಮೇಲಣ ಅತ್ಯಾಚಾರ ಹಾಗು ಬೆಲೆ ಏರಿಕೆ ಜನರ ಬದುಕನ್ನು ದುಸ್ಥಿತಿಗೆ ತಳ್ಳುತ್ತಿದೆ. ಈ ಪರಿಸ್ಥಿತಿಗಳು ಸುಧಾರಿಸಿದಾಗ ಮಾತ್ರ ನಾಗರಿಕರಿಗೆ ನಿಜ ಸ್ವಾತಂತ್ರ್ಯ ಸಿಕ್ಕಾಂತಾಗುತ್ತದೆ ಎಂದು ಸ್ವಾತಂತ್ರ್ಯೋತ್ಸವದ ಶುಭ ಹಾರೈಸಿದರು.

ಶ್ರೀ ಮಾಧವ ಅವರು ಸ್ವಾತಂತ್ರ್ಯಕ್ಕೆ ಶ್ರಮಿಸಿದವರನ್ನು ಸ್ಮರಿಸುತ್ತ ಪ್ರಸ್ತುತವಾಗಿ ಸ್ವಾತಂತ್ರ್ಯ ಪೂರ್ವದಲ್ಲಿ, ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಾಲಘಟ್ಟದಲ್ಲಿ ಭಾರತದ ನಾಗರೀಕರು ಅನುಭವಿಸಿದ ಕಡು ಕಷ್ಟಗಳನ್ನು ತಿಳಿಸುತ್ತಾ, ಅಂದಿನ ಆ ಜನರ ಹೋರಾಟದ ಫಲವಾಗಿ ಇಂದಿನ ದಿನಗಳಲ್ಲಿ ನಮಗೆ ಎಲ್ಲ ರೀತಿಯ ಸೌಲಭ್ಯಗಳು ಅನಾಯಾಸವಾಗಿ ಸಿಕ್ಕುತ್ತಿವೆ ಎಂದು ತಿಳಿಸಿದರು. ಸಮಾಜದಲ್ಲಿ ಅನೇಕ ಅಸಮಾನತೆಗಳು ಇವೆ. ಅಸಮಾನತೆಗಳು ದೂರಾವಾದಾಗ ಮಾತ್ರ ನಿಜವಾದ ಸ್ವಾತಂತ್ರ್ಯ ದೊರೆತ ಹಾಗೆ ಆಗುತ್ತದೆ ಎಂದು ಅವರು ತಿಳಿಸಿದರು.

ಚಲನಚಿತ್ರ ನಿರ್ದೇಶಕರುಗಳಾದ ಶ್ರೀ ರವೀಂದ್ರನಾಥ ಸಿರಿವರ ಮತ್ತು ಶ್ರೀ ರವಿ ಎಂ. ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಟಿ.ಎಂ. ಮೈಲಾರಪ್ಪ, ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶ್ರೀ ರಾಧಾಕೃಷ್ಣ, ಶ್ರೀಮತಿ ಆಶಾಶ್ಯಾಮಸುಂದರ, ಶ್ರೀ ಟಿ.ಪಿ. ಬೆಳ್ಳಿಯಪ್ಪ ಹಾಗು ಸಂಘದ ಸಕ್ರಿಯ ಸದಸ್ಯರುಗಳಾದ ಶ್ರೀ ಚೆನ್ನು ಎಸ್. ಮಠದ, ಶ್ರೀ ಕೆ.ಎಸ್.ಜಿ. ಶೆಟ್ಟಿ, ಶ್ರೀ ಶಿವಾನಂದ ಇಂಗಳೇಶ್ವರ, ಶ್ರೀ ದಿನೇಶ್ ಶೆಣೈ, ಶ್ರೀ ನಾರಾಯಣ ಬಿ ಅವರುಗಳು ಭಾಗವಹಿಸಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ.ನಾಗರಾಜ ಅವರು ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು. ಅ

*ಶಿವಾನಂದ ಇಂಗಳೇಶ್ವರ*

# ಹಳ್ಳಿಯ ಜೀವನದ ಸೊಗಡಿನ ಚಿತ್ರಕಲಾ ಪ್ರದರ್ಶನ




ಕಲಾವಿದ ಸುನಿಲ ವಿ. ಮಠದ ಅವರ ಚಿತ್ರಕಲಾ ಪ್ರದರ್ಶನ ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಆಗಸ್ಟ್ 20 ರಿಂದ 24ರವರೆಗೆ ಪ್ರದರ್ಶನಗೊಂಡಿತು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ.ನಾಗರಾಜ ಅವರು ಈ ಸಂದರ್ಭದಲ್ಲಿ ಮಾತಾಡುತ್ತಾ "ಕಲೆಯು ಮನುಷ್ಯನ ಒಂದು ಅವಿಭಾಜ್ಯ ಅಂಗ. ಕಲೆಯನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ನಮ್ಮ ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿ ಸಿಗುತ್ತದೆ. ಪ್ರಕೃತಿಯ ಸೌಂದರ್ಯ ಹೇಗೋ, ಹಾಗೆಯೇ ಚಿತ್ರಕಲೆಯು ಕೂಡಾ ನಮಗೆ ಮಾದರಿ. ಹಳ್ಳಿಯಲ್ಲಿರುವ ಮನುಷ್ಯರ ದಿನನಿತ್ಯ ಜೀವನದ ಚಿತ್ರಗಳನ್ನು ಸುನಿಲ ಮಠದ ಅವರು ನೈಜವಾಗಿ ಕ್ಯಾನ್‌ವಾಸ್‌ನಲ್ಲಿ ಚಿತ್ರಿಸಿ ದೆಹಲಿ ಮಹಾನಗರದ ಜನರಿಗೆ ತೋರಿಸಿದ್ದಾರೆ" ಎಂದರು.

ಸುನಿಲ ವಿ. ಮಠದ ಅವರು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಚಿಂಚಣಿ ಗ್ರಾಮದಲ್ಲಿ 1973ರಲ್ಲಿ ಜನಿಸಿದರು. ಚಿತ್ರಕಲೆಯು ಅವರ ಚಿಕ್ಕವಯಸ್ಸಿನಿಂದ ಬೆಳೆಸಿಕೊಂಡ ಹವ್ಯಾಸ. ರೈತಾಪಿ ಕುಟುಂಬದಿಂದ ಬಂದು ಬಹಳ ಕಷ್ಟಪಟ್ಟು ವಿದ್ಯಾಭ್ಯಾಸ ಪೂರೈಸಿ ಗುರುಗಳಾದ ಎಂ.ಆರ್. ಬಾಳಿಕಾಯಿ ಅವರ ಮಾರ್ಗದರ್ಶನದಲ್ಲಿ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಧಾರವಾಡದ ಸರ್ಕಾರಿ ಮಹಾವಿದ್ಯಾಲಯದಲ್ಲಿ ಪಡೆದರು. ಅವರು ಹಲವು ಏಕವ್ಯಕ್ತಿ ಮತ್ತು ಸಮೂಹ ಚಿತ್ರಕಲಾ ಪ್ರದರ್ಶನ ಮಾಡಿದ್ದಾರೆ. ಪ್ರದರ್ಶನದ ಸಂದರ್ಭದಲ್ಲಿ ಹಲವಾರು ಚಿತ್ರ ಕಲಾಸಕ್ತರು ಸುನೀಲ ಮಠದ ಅವರ ಕಲಾಕೃತಿಗಳನ್ನು ವೀಕ್ಷಿಸಿದರು. ಶ್ರೀ ಸುಧೀರ್ ಫಡ್ನೀಸ್ ಅವರು ಸಹಕರಿಸಿದರು. ಅ

*ಅಭಿಮತ ವರದಿ*




# ಸರ್ವ ಸದಸ್ಯರ ವಾರ್ಷಿಕ ಸಭೆ





ದೆಹಲಿ ಕರ್ನಾಟಕ ಸಂಘದ 2013–14ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಇದೇ ಆಗಸ್ಟ್ 17ರಂದು ಸಂಘದ ಸಭಾಂಗಣದಲ್ಲಿ ನಡೆಯಿತು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸರ್ವ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ಅವರು ತಮ್ಮ ಸ್ವಾಗತ ಭಾಷಣದಲ್ಲಿ ಕಳೆದ ಸಾಲಿನಲ್ಲಿ ಕೈಗೊಂಡ ಪ್ರಮುಖ ಕಾರ್ಯಗಳ ವಿವರವನ್ನು ಪ್ರಾಸ್ತಾವಿಕವಾಗಿ ನೀಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಾರ್ಷಿಕ ವರದಿಯನ್ನು ಹಾಗೂ ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ಅವರು ಪರಿಶೋಧಿತ ಲೆಕ್ಕಪತ್ರ ಮತ್ತು 2014–15ನೇ ಸಾಲಿನ ಬಜೆಟನ್ನು ಮಂಡಿಸಿದರು. ಉಪಾಧ್ಯಕ್ಷೆ ಶ್ರೀಮತಿ ಆಶಾಲತಾ ಎಂ ಹಾಗೂ ಜಂಟಿ ಕಾರ್ಯದರ್ಶಿ ಶ್ರೀ ಟಿ.ಎಂ. ಮೈಲಾರಪ್ಪ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಘದ ಮಾಜಿ ಅಧ್ಯಕ್ಷರುಗಳಾದ ಡಾ. ಪುರುಷೋತ್ತಮ ಬಿಳಿಮಲೆ, ಡಾ. ವೆಂಕಟಾಚಲ ಹೆಗಡೆ, ಮಾಜಿ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್, ಮಾಜಿ ಕೋಶಾಧಿಕಾರಿಗಳಾದ ಶ್ರೀ ಈಶ್ವರ ಮಡಿವಾಳ್, ಶ್ರೀ ಕೆ.ಆರ್. ರಾಮಮೂರ್ತಿ, ಹಿರಿಯರಾದ ಶ್ರೀ ಎನ್.ಎ. ಮಾಧವ, ಡಾ. ಅಹಲ್ಯಾ ಚಿಂತಾಮಣಿ, ಶ್ರೀ ಕೆ.ಎಸ್.ಜಿ. ಶೆಟ್ಟಿ, ಸದಸ್ಯರುಗಳಾದ ಶ್ರೀ ಅಶೋಕ್ ಕುಮಾರ್ ವಿ, ಡಾ. ಶಶಿಕುಮಾರ್, ಶ್ರೀ ಎನ್.ಆರ್. ಶ್ರೀನಾಥ್, ಶ್ರೀ ಆರ್.ಎಸ್. ಶ್ಯಾಮಸುಂದರ್, ಶ್ರೀ ಬಾಲಕೃಷ್ಣ ನಾಯ್ಕ್ ಡಿ., ಶ್ರೀಮತಿ ರೇಣುಕಾ ನಿಡಗುಂದಿ, ಶ್ರೀ ಶ್ರೀಹರಿ, ಶ್ರೀ ಎ.ಟಿ. ಶ್ರೀನಿವಾಸ್, ಶ್ರೀ ಎಸ್.ಎಲ್. ಭಂಡಾರ್‌ಕರ್, ಶ್ರೀ ಮುನಿರಾಜು, ಶ್ರೀ ಸಾಬುದರ್ಗಾ, ಮೊದಲಾದವರು ಸೂಕ್ತ ಸಲಹೆ ಹಾಗೂ ಅಭಿಪ್ರಾಯಗಳನ್ನು ನೀಡಿದರು.

ಚರ್ಚೆಯ ಬಳಿಕ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರಗಳನ್ನು ಅನುಮೋದಿಸಲಾಯಿತು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರೂ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದ ಸರ್ವ ಸದಸ್ಯರ ವಾರ್ಷಿಕ ಸಭೆಯೂ ನಡೆದು ನಿಗದಿತ ಸಮಯದಲ್ಲಿ ಮುಕ್ತಾಯಗೊಂಡಿತು. ಆರಂಭದಲ್ಲಿ ಈ ವರ್ಷ ಅಗಲಿದ ದೆಹಲಿಯ ಹಿರಿಯ ಕನ್ನಡಿಗರಾದ ಶ್ರೀ ಶಿವಶಂಕರ್ ಟಿ.ಎಸ್., ಶ್ರೀ ಸಿ.ಎಂ. ಮಂಜುನಾಥ ಶೆಟ್ಟಿ, ಶ್ರೀಮತಿ ಹೇಮಲತಾ ಮುದ್ದಪ್ಪ, ಡಾ. ಎಲ್.ಎಸ್. ಭಟ್, ಶ್ರೀ ಕೆ.ಎಸ್. ಬಾಲಶಂಕರ್, ಶ್ರೀಮತಿ ಕಮಲಮ್ಮ ಶಾರದಾಪ್ರಸಾದ್ ಅವರನ್ನು ನೆನೆದು ಎರಡು ನಿಮಿಷಗಳ ಮೌನ ಪ್ರಾರ್ಥನೆ ನಡೆಸಲಾಯಿತು. ಅ

## ಕರ್ನಾಟಕ ಸರಕಾರವು ಕನ್ನಡ ಶಾಲೆಗಳನ್ನು ಮುಚ್ಚುವುದನ್ನು ನಿಲ್ಲಿಸಬೇಕು

ದೆಹಲಿಯ ಸುಮಾರು 250 ಮಂದಿ ಕನ್ನಡಿಗರು ವಿವಿಧ ಕ್ಷೇತ್ರಗಳಲಿ ಸೇವೆ ಸಲ್ಲಿಸುತಿರುವ–ವಕೀಲರು, ಸಾಹಿತಿಗಳು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು (ಜೆ.ಎನ್.ಯು., ಐ.ಐ.ಟಿ. ಹಾಗು ದೆಹಲಿ ವಿಶ್ವ ವಿದ್ಯಾಲಯ) ಸತತವಾಗಿ ಮೇ, ಜೂನ್ ಹಾಗು ಜುಲೈ ತಿಂಗಳಲ್ಲಿ ವಿವರವಾಗಿ ಚರ್ಚಿಸಿ, ವಿಚಾರ ಮಾಡಿ ದೆಹಲಿ ಕರ್ನಾಟಕ ಸಂಘದ ನೇತೃತ್ವದಲ್ಲಿ ಕರ್ನಾಟಕ ಸರ್ಕಾರ ಹಾಗೂ ಇನ್ನಿತರ ಜವಾಬ್ದಾರಿಯುತ ಕನ್ನಡ ಭಾಷೆ, ಶಿಕ್ಷಣ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಅಧಿಕಾರಿಯುತ ಮಂಡಳಿ, ಸಂಸ್ಥೆ, ಪರಿಷತ್ತುಗಳಿಗೆ ಈ ಕೆಳಗಿನ ಠರಾವನ್ನು ಸಿದ್ಧಪಡಿಸಿತ್ತು. ಆಗಸ್ಟ್ 17ರಂದು ನಡೆದ ದೆಹಲಿ ಕರ್ನಾಟಕ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಈ ಕೆಳಗಿನ ಠರಾವನ್ನು ಅಂಗೀಕರಿಸಿತು. ಅ

### ಠರಾವು

ಇತ್ತೀಚಿನ ದಿನಗಳಲ್ಲಿ ಕನ್ನಡ ಮಾಧ್ಯಮ ಶಾಲೆಗಳಿಗೆ ಮಕ್ಕಳು ಸೇರುವುದು ಕಡಿಮೆಯಾಗುತ್ತಿದೆ. ಕನ್ನಡದಲ್ಲಿ ಓದುವ ಬರೆಯುವ ಚಟುವಟಿಕೆಗಳೇ ಕ್ಷೀಣವಾಗುತ್ತಿದ್ದು ಕನ್ನಡ ಶಾಲೆಗಳು ಮುಚ್ಚಿಹೋಗುತಿವೆ. ಮುಂದಿನ ಜನಾಂಗವಾದ ನಮ್ಮ ಇಂದಿನ ಮಕ್ಕಳು ಕನ್ನಡದಲ್ಲಿ ಓದಿ ಬರೆಯದಿದ್ದರೆ ಕನ್ನಡ ಭಾಷೆ ಹಾಗೂ ಸಂಸ್ಕೃತಿಕ್ರಮೇಣವಾಗಿ ಕ್ಷೀಣಿಸುತ್ತಾ ಹೋಗುತ್ತದೆ. ಇದು ಕನ್ನಡನಾಡಿನ ಅಸ್ತಿತ್ವಕ್ಕೆ ಧಕ್ಕೆ ತರಬಹುದು. ಆದುದರಿಂದ ಕರ್ನಾಟಕ ಸರಕಾರವು ಕನ್ನಡ ಶಾಲೆಗಳನ್ನು ಮುಚ್ಚುವುದನ್ನು ನಿಲ್ಲಿಸಬೇಕು ಹಾಗೂ ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿ ಎಲ್ಲಾ ಶಾಲೆಗಳಲ್ಲಿ (ಸರಕಾರಿ–ಖಾಸಗಿ, ಅಲ್ಪಸಂಖ್ಯಾತರ, ಅನ್ಯಮತ, ಧರ್ಮದವರ) ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಿ ಪ್ರತಿಯೊಂದು ಕರ್ನಾಟಕದ ಮಗುವಿಗೂ ಕನ್ನಡ ಭಾಷೆಯಲ್ಲಿ ಓದುವ, ಬರೆಯುವ ಮತ್ತು ನಿರರ್ಗಳವಾಗಿ ಮಾತನಾಡುವ ಸಾಮರ್ಥ್ಯ ಬೆಳೆಸುವಂತೆ ಮಾಡಲು ಅನುಕೂಲಕರ ವಾತಾವರಣ ಕಲ್ಪಿಸಿಕೊಡಬೇಕೆಂದು ನಾವು ದೆಹಲಿ ಕರ್ನಾಟಕ ಸಂಘದ ಸರ್ವ ಸದಸ್ಯರು ಆಗ್ರಹಿಸುತ್ತೇವೆ. ಅ



# ‘ಗಾಂಧಿ ಜಯಂತಿ’ ಮತ್ತು ‘ಕಳವು’ ಚಲನಚಿತ್ರಗಳ ಪ್ರದರ್ಶನ

ದೆಹಲಿ ಕರ್ನಾಟಕ ಸಂಘದಲ್ಲಿ ಆಗಸ್ಟ್ 15ರಂದು ರವೀಂದ್ರನಾಥ ಸಿರಿವರ ನಿರ್ದೇಶನದ ‘ಗಾಂಧಿ ಜಯಂತಿ’ ಮತ್ತು ರವಿ ಎಂ. ನಿರ್ದೇಶನದ ‘ಕಳವು’ ಚಲನಚಿತ್ರಗಳು ಪ್ರದರ್ಶನಗೊಂಡವು.

ಈ ಸಂದರ್ಭದಲ್ಲಿ ಹಿರಿಯ ಸಾಹಿತಿ ಪ್ರೊ. ಎಚ್.ಎಸ್. ಶಿವಪ್ರಕಾಶ್ ಅವರು ಮಾತನಾಡುತ್ತ ಕನ್ನಡ ರಂಗಭೂಮಿಗೆ ಸಿ.ಜಿ.ಕೆ. ಅವರು ಒಂದು ನೈಜಶೈಲಿ ಅಂದ್ರೆ ರಿಯಲಿಸ್ಟಿಕ್ ವಸ್ತು, ವಾಸ್ತವಿಕ ಶೈಲಿ, ವಾಸ್ತವಾದಿ ಶೈಲಿ ಏನಿತ್ತು ಅದರ ಒಂದು ಅಂಶವನ್ನು ತಂದರು. ಈ ಮಧ್ಯೆ ಕೆಲ ಕಲಾವಿದರು, ರಂಗಕರ್ಮಿಗಳು ಹರಿಕಥೆ, ವೀರಗಾಸೆ ಶುರು ಮಾಡಿದರು. ಇದ್ದಕ್ಕಿದ್ದ ಹಾಗೆ ಹೆಂಗಸರು ಹರಿಕಥೆ ಹೇಳಲು ಶುರುಮಾಡಿದರು. ಆ ಮಧ್ಯೆ ಒಂದೊಂದು ಪಾತ್ರವೂ ಒಂದೊಂದು ಪುರಾವೆ ಆಗುತ್ತಾ ಹೋಗುತ್ತದೆ. ಇಂದಿನ ನಿರ್ದೇಶಕ ರವಿ ಎಂ. ಅವರ ‘ಕಳವು’ ಸಿನಿಮಾದಲ್ಲಿ ಎಮ್ಮೆ ಕಳೆದು ಹೋಗಿದೆ, ಕಳವಿನ ಆರೋಪ ಹೊತ್ತ ಪಟ್ಲನ ಒಂದು ಗುಟ್ಟು ಕೊನೆಗೂ ರಟ್ಟಾಗುವುದೇ ಇಲ್ಲ. ದೇವನೂರು ಮಹಾದೇವ ಅವರ ಒಡಲಾಳ ನಾಟಕದಲ್ಲಿ ಹುಂಜ ಕಳವಾಗಿರುತ್ತದೆ. ಇಲ್ಲಿ ಹುಂಜದ ಬದಲಾಗಿ ಎಮ್ಮೆ ಕಳವಾಗಿದೆ. ಆದರೆ ಇಲ್ಲಿ ಕಾಡುವ ತೊಂದರೆ ಈ ಎರಡು ಶೈಲಿಯ ಒಂದು ಸಮ್ಮಿಲನದಲ್ಲಿ.

ಮುಂದೆ ಕಲಾವಿದರ ನಟನೆಯ ಬಗ್ಗೆ ಹೇಳುತ್ತಾ ಪ್ರೊ. ಶಿವಪ್ರಕಾಶ್ ಅವರು ಉಮಾಶ್ರೀ ಅವರು ನಮ್ಮ ಕನ್ನಡ ರಂಗಭೂಮಿಗೆ ದೊರೆತ ಅತ್ಯದ್ಭುತ ನಟಿಯರಲ್ಲಿ ಒಬ್ಬರು. ನುರಿತ ನಟರು ಅಭಿನಯದಲ್ಲಿ ಕೆಲವು ಕಡೆ ಅದು ತೀರ ವಾಸ್ತವಾದಿ ಅಭಿನಯವಾಗಿ ನಟಿಸುತ್ತಾ ಅತೀ ಆದಾಗ ಅದು ಮೆಲೋ ಡ್ರಾಮ ಆಗುತ್ತೆ ಎಂದರು. ಈ ಬಗ್ಗೆ ಹೆಚ್ಚಿನ ಎಚ್ಚರವನ್ನು ವಹಿಸುವುದು ಅವಶ್ಯ. ಈ ಚಲನಚಿತ್ರದಲ್ಲಿ ಶ್ರೀ ಕೆ.ವೈ. ನಾರಾಯಣ ಸ್ವಾಮಿ ಕೋಲಾರದ ಗಂಡು ಮೆಟ್ಟಿನ ಭಾಷೆಯನ್ನು ಬಹಳ ಸಮರ್ಥವಾಗಿ ಬಳಸಿದ್ದು ಬೇರೆ ಕನ್ನಡ ಸಿನೆಮಾ ಹಾಗು ಟಿ.ವಿ. ಧಾರವಾಹಿಗಳ ಸಂಭಾಷಣೆಗಳನ್ನು ನೋಡಿದಾಗ ವ್ಯತ್ಯಾಸ ಗೊತ್ತಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಇದು ಪೂರ್ಣವಾದ ಸಿನೆಮಾ ಅಲ್ಲ. ನಮ್ಮ ರಂಗನಟರು ಮಾಡಿದ ಪ್ರಯೋಗ. ಇದು ಮುಂದುವರಿದರೆ, ಈ ರೀತಿಯ ಚಿತ್ರಗಳನ್ನು ಮಾಡುತ್ತಾ ಹೋದರೆ ಬಹುಶಃ ಇವತ್ತು ಅವನತಿಯ ಹಾದಿಯಲ್ಲಿರುವ ಕನ್ನಡ ಸಿನೆಮಾಕ್ಕೆ ನಮ್ಮ ರಂಗಭೂಮಿಯವರು ಒಂದು ಪರ್ಯಾಯವನ್ನು ಕೊಡಬಹುದು ಎನ್ನುವ ಆಶಾಕಿರಣವನ್ನು ಮೂಡಿಸುತ್ತದೆ ಎಂದು ತಿಳಿಸುತ್ತಾ ನಿರ್ದೇಶಕದ್ವಯರನ್ನು ಅಭಿನಂದಿಸಿದರು.

ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸ್ವಾತಂತ್ರ್ಯೋತ್ಸವದ ಶುಭಾಶಯಗಳನ್ನು ತಿಳಿಸುತ್ತಾ, ಈ ಎರಡು ಚಲನಚಿತ್ರಗಳ ಪ್ರದರ್ಶನಕ್ಕೆ ಕಾರಣಕರ್ತರಾದ ಶ್ರೀ ದಿನೇಶ್ ಶೆಣೈ ಅವರನ್ನು ಅಭಿನಂದಿಸಿದರು. ಮುಂದುವರೆದು ಈ ಚಲನಚಿತ್ರಗಳಲ್ಲಿ ಅಭಿನಯಿಸಿದ ಸುಮಾರು ರಂಗಕಲಾವಿದರುಗಳ ನಾಟಕ ಪ್ರದರ್ಶನವನ್ನು ದೆಹಲಿ ಕರ್ನಾಟಕ ಸಂಘದ ರಂಗಮಂಚದ ಮೇಲೆ ನೋಡಿದ್ದಾರೆ. ಹೀಗಾಗಿ ಸಿನಿಮಾ ನೋಡುತ್ತಿರುವಾಗ ಒಂದು ಆಪ್ತಭಾವ ಬಂದಿರಲು ಸಾಕು. ಕರ್ನಾಟಕದಲ್ಲಿ ಬಿಡುಗಡೆಯಾಗುತ್ತಿರುವ ಹೊಸ ಚಲನಚಿತ್ರಗಳನ್ನು ಸಂಘದಲ್ಲಿ ಪ್ರದರ್ಶಿಸಲು ಸಾಕಷ್ಟು ಸಲಹೆ ಸೂಚನೆಗಳು ಬರುತ್ತಿರುತ್ತವೆ, ಯಾವುದೇ ಚಲನಚಿತ್ರ ಪ್ರದರ್ಶಿಸುವ ಮುಂಚೆ ಸಾಕಷ್ಟು ವಿಚಾರ ವಿನಿಮಯ ಮಾಡಲಾಗುತ್ತದೆ. ಅದರೆ ಈ ಎರಡು ವಿಭಿನ್ನ ಚಲನಚಿತ್ರಗಳ ಪ್ರದರ್ಶನದ ಬಗ್ಗೆ ಶೆಣೈ ಅವರು ತಿಳಿಸಿದಾಗ ರಂಗಭೂಮಿಯ ಕಲಾವಿದರಿಂದ ನಿರ್ಮಿತ ಹಾಗು ನಟಿಸಿದ ಚಲನಚಿತ್ರವಾದ್ದರಿಂದ ಯಾವುದೇ ವಿಚಾರ ವಿಮರ್ಶೆ ಮಾಡದೆ ಸಂಘದಲ್ಲಿ ಪ್ರದರ್ಶನಕ್ಕೆ ಒಪ್ಪಿಕೊಂಡದ್ದೆವು. ದೆಹಲಿಯಲ್ಲಿರುವ ಕನ್ನಡಿಗರಲ್ಲಿ ಸುಮಾರು 100ಕ್ಕೂ ಹೆಚ್ಚು ಕಲಾವಿದರು, ರಂಗಕರ್ಮಿಗಳು ರಂಗಕಾರ್ಯದಲ್ಲಿ ಸಕ್ರಿಯರಾಗಿದ್ದಾರೆ. ಮುಂಬರುವ ದಿನಗಳಲ್ಲಿ ದೆಹಲಿ ಕಲಾವಿದರನ್ನೊಳಗೊಂಡ ಚಲನಚಿತ್ರ ನಿರ್ದೇಶಿಸಲು ನಿರ್ದೇಶಕರಿಬ್ಬರಿಗೂ ವಿನಂತಿಸುತ್ತ ಅದಕ್ಕೆ ಸಂಘ ಸಂಪೂರ್ಣ ಬೆಂಬಲ ಕೊಡುವುದಾಗಿ ಸೂಚಿಸಿದರು. ಕೋಟಿಗಟ್ಟಲೆ ಹಣ ಖರ್ಚು ಮಾಡಿ ಎಂಥೆಂತವೋ ಚಲನಚಿತ್ರಗಳನ್ನು ನಿರ್ಮಿಸುವುದಕ್ಕಿಂತ ಅಲ್ಪ ಖರ್ಚಿನ ಇಂತಹ ರಚನಾತ್ಮಕ ಚಲನಚಿತ್ರಗಳನ್ನು ನಿರ್ಮಿಸಿ, ನಿರ್ದೇಶಿಸಿ ಜನಮಾನಸಕ್ಕೆ ತಲುಪಿಸುವ ಈ ಕಾರ್ಯ ಪ್ರಶಂಸನೀಯ ಎಂದು ಹೇಳುತ್ತಾ ಇನ್ನೂ ಹೆಚ್ಚಿನ ಚಲನಚಿತ್ರಗಳು ಈ ನಿರ್ದೇಶಕರುಗಳಿಂದ ಬರಲಿ ಎಂದು ಹಾರೈಸಿದರು.

**ಕಳವು ಚಿತ್ರದ ಉತ್ತಮ ಸ್ಕ್ರೀನ್‌ಪ್ಲೇಗೋಸ್ಕರ 2012ರ ರಾಜ್ಯ ಪ್ರಶಸ್ತಿ ಶ್ರೀ ಕೆ.ವೈ. ನಾರಾಯಣ ಸ್ವಾಮಿ ಅವರಿಗೆ ದೊರೆತಿದೆ. ಹಾಗೂ ಅತ್ಯುತ್ತಮ ಪೋಷಕ ನಟ(ಗೌಡ)ನ ಪಾತ್ರಕ್ಕೆ ರಂಗಕರ್ಮಿ ಶ್ರೀ ಕರಿಸುಬ್ಬು ಅವರಿಗೆ 2012 ರಾಜ್ಯ ಪ್ರಶಸ್ತಿ ದೊರೆತಿದೆ.**

ನಂತರ ಪ್ರೇಕ್ಷಕ ಮತ್ತು ನಿರ್ದೇಶಕರುಗಳ ನಡುವೆ ನೇರ ಸಂವಾದ ನಡೆಯಿತು. ಎರಡು ಚಲನಚಿತ್ರಗಳ ಬಗ್ಗೆ ಸಾಕಷ್ಟು ವಿಚಾರ ವಿಮರ್ಶೆ ನಡೆಯಿತು. ಕಾರ್ಯಕ್ರಮವನ್ನು ಜಂಟಿ ಕಾರ್ಯದರ್ಶಿ ಟಿ.ಎಂ. ಮೈಲಾರಪ್ಪ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ವಂದಿಸಿದರು.

ಈ ಎರಡು ಚಲನಚಿತ್ರಗಳ ವಿಶೇಷತೆ ಏನು ಅಂದ್ರೆ ಇಬ್ಬರೂ ನಿರ್ದೇಶಕರುಗಳು ಕನ್ನಡ ರಂಗಭೂಮಿಯ ಹಿನ್ನಲೆಯಲ್ಲಿ ಬೆಳೆದು ಬಂದವರು. ಹೀಗಾಗಿ ಸಂಪೂರ್ಣವಾಗಿ ರಂಗಭೂಮಿಯ ಕಲಾವಿದರು, ರಂಗಕರ್ಮಿಗಳಿಂದ ಒಳಗೊಂಡಿರುವ ಚಲನಚಿತ್ರಗಳು. ಅ

*ಶಿವಾನಂದ ಇಂಗಳೇಶ್ವರ*

# ದೆಹಲಿ ಕರ್ನಾಟಕ ಸಂಘದಲ್ಲಿ ಕೊಂಕಣಿ ಸಂಭ್ರಮ

ಕರ್ನಾಟಕದಲ್ಲಿ ಕನ್ನಡದ ಮಗಳಾಗಿ ತುಳು, ಕೊಂಕಣಿ, ಕೊಡವ, ಬ್ಯಾರಿ ಭಾಷೆಗಳಿವೆ. ಕೊಂಕಣಿಯಲ್ಲಿಯೂ ವಿವಿಧ ಸಮುದಾಯ ಮತ್ತು ಪ್ರಾದೇಶಿಕ ಪ್ರಭೇಧಗಳಿವೆ ಎಂದು ರಾಜ್ಯಸಭಾ ಸದಸ್ಯ ಹಾಗೂ ಮಾಜಿ ಕೇಂದ್ರ ಸಚಿವ ಶ್ರೀ ಆಸ್ಕರ್ ಫರ್ನಾಂಡಿಸ್ ಅವರು ಹೇಳಿದರು.

ಅವರು ದೆಹಲಿ ಕರ್ನಾಟಕ ಸಂಘ ಮತ್ತು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗಳೂರು ಇದರ ಸಹಯೋಗದೊಂದಿಗೆ ದೆಹಲಿ ಕರ್ನಾಟಕ ಸಂಘದಲ್ಲಿ 2014ರ ಆಗಸ್ಟ್ 3 ರಂದು ನಡೆಸಿದ ಕೊಂಕಣಿ ಸಂಭ್ರಮದ ಮುಖ್ಯ ಅತಿಥಿಯಾಗಿ ಮಾತಾಡುತ್ತಿದ್ದರು. ಕರ್ನಾಟಕ ನೆಲದ ಗುಣವೇ ವಿವಿಧ ಭಾಷಿಕರಲ್ಲಿನ ಅನ್ಯೋನ್ಯತೆಯನ್ನು ತಂದಿದೆ. ತಾನು ಕೂಡಾ ಕೊಂಕಣಿ ಭಾಷಿಕನಾದರೂ ತುಳು, ಕನ್ನಡ ಭಾಷೆಯ ಮೇಲಿನ ಮಮತೆಯಿಂದ ಕರ್ನಾಟಕದ ಕಲೆ ಯಕ್ಷಗಾನದಲ್ಲಿ ಆಸಕ್ತನಾಗಿ ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಭೀಷ್ಮನ ಪಾತ್ರ ವಹಿಸಿದ್ದನ್ನು ಶ್ರೀ ಆಸ್ಕರ್ ಫರ್ನಾಂಡಿಸ್ ಅವರು ನೆನಪಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಶ್ರೀ ರೊನಾಲ್ಡ್ ಕ್ಯಾಸ್ತೆಲಿನೊ ಅವರು ಮಾತಾಡುತ್ತಾ ಕೊಂಕಣಿ, ಕನ್ನಡ ಹಾಗೂ ವಿದೇಶೀ ಪ್ರೇಕ್ಷಕರಿಗಾಗಿ ಆಂಗ್ಲಭಾಷೆಯಲ್ಲಿ ಕೊಂಕಣಿ ಭಾಷೆಯ ವೈವಿಧ್ಯ, ವಿವಿಧತೆಯಲ್ಲಿ ಏಕತೆಯನ್ನು ತೋರುವ ಔದಾರ್ಯ ಹಾಗೂ ಕೊಂಕಣಿ ಭಾಷೆಯ ಪ್ರಾಚೀನತೆಯ ಬಗ್ಗೆ ವಿವರಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತಾಡುತ್ತಾ ಕರ್ನಾಟಕದ ವಿವಿಧ ಭಾಷೆಗಳಾದ ಕೊಂಕಣಿ, ತುಳು, ಕೊಡವ, ಅರೆಭಾಷೆ, ಬ್ಯಾರಿ ಭಾಷೆ ಇತ್ಯಾದಿ ಮಾತುಗಳನ್ನಾಡುವ ಜನರ ಕಲೆ, ಸಾಹಿತ್ಯ, ಸಂಸ್ಕೃತಿಗಳಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ದೆಹಲಿ ಕರ್ನಾಟಕ ಸಂಘವು ಕೊಂಕಣಿ ಸಂಭ್ರಮ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈಗಾಗಲೇ ಈ ನಿಟ್ಟಿನಲ್ಲಿ ತುಳು ಹಾಗೂ ಕೊಡವ ಕಾರ್ಯಕ್ರಮಗಳನ್ನು ನಡೆಸಲಾಗಿದೆ ಎಂದು ಶ್ರೀ ಬೆಳ್ಳಾರೆ ಅವರು ಪ್ರಾಸ್ತಾವಿಕ ಭಾಷಣದಲ್ಲಿ ಹೇಳಿದರು.



ಕಾರ್ಯಕ್ರಮದಲ್ಲಿ ಕರ್ನಾಟಕ ಕೊಂಕಣಿ ಅಕಾಡೆಮಿ ರಿಜಿಸ್ಟ್ರಾರ್ ಡಾ. ಬಿ. ದೇವದಾಸ್ ಪೈ ಹಾಗೂ ಕೆನರಾ ಕಲ್ಚರಲ್ ಅಸೋಸಿಯೇಷನ್, ದೆಹಲಿಯ ಶ್ರೀ ಪಾಯಸ್ ಮೊಂತೆರೊ ಅತಿಥಿಗಳಾಗಿ ಭಾಗವಹಿಸಿದ್ದರು. ಸಂಘದ ಕಾರ್ಯದರ್ಶಿ ಶ್ರೀ ಸಿ.ಎಂ.ನಾಗರಾಜ ಅವರು ವಂದಿಸಿದರು. ಶ್ರೀಮತಿ ಪೂಜಾ ಪ್ರದೀಪ್ ಅವರು ಕಾರ್ಯಕ್ರಮ ನಿರೂಪಣೆ ಮಾಡಿದರು. ಕು. ಪ್ರೇರಣಾಳ ದೇವರ ಸ್ತುತಿಯೊಂದಿಗೆ ಸಭಾ ಕಾರ್ಯಕ್ರಮ ಪ್ರಾರಂಭವಾಯಿತು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಟ್ಕಳದ ಖಾರ್ವಿ ಕಲಾಮಾಂಡ್ ಇವರಿಂದ ಗುಮಟೆ ಕುಣಿತ, ಕೋಲಾಟ ಹಾಗೂ ಮೀನುಗಾರಿಕೆಗೆ ಸಂಬಂಧಿಸಿದ ಸಾಂಪ್ರಾದಾಯಿಕ ನೃತ್ಯಗಳು, ಎಡಪದವಿನ ಕುಡುಬಿ ಜಾನಪದ ಕಲಾವೇದಿಕೆಯಿಂದ ಕೋಲಾಟ ಹಾಗೂ ಹಗ್ಗದಾಟ ಎಂಬ ಸಾಂಪ್ರದಾಯಿಕ ನೃತ್ಯಗಳು, ಮಂಗಳೂರಿನ ನಾಚ್ ಸೋಭಾಣ್ ವತಿಯಿಂದ ವಿವಿಧ ರಿಮೇಕ್ ನೃತ್ಯಗಳು ಪ್ರದರ್ಶನಗೊಂಡವು. ಅ

***ಅಭಿಮತ ವರದಿ***










# ಜನಕಪುರಿ ಕನ್ನಡ ಕೂಟದ ವಾರ್ಷಿಕೋತ್ಸವ ಕೂಟ ರತ್ನ ಪ್ರಶಸ್ತಿ ಪ್ರದಾನ





ಜನಕಪುರಿ ಕನ್ನಡ ಕೂಟದ ವಾರ್ಷಿಕ ದಿನಾಚರಣೆ ಹಾಗೂ ಮಹಿಳಾ ಮತ್ತು ಮಕ್ಕಳ ದಿನಾಚರಣೆ ಜೊತೆಗೆ ದೆಹಲಿ ಕರ್ನಾಟಕ ಸಂಘದ ಪ್ರಾಯೋಜಿಸಿದ್ದ ಸಂಗೀತ ಲಹರಿ ಕಾರ್ಯಕ್ರಮವು ಜನಕಪುರಿಯ ಗೀತಾಮಂದಿರದಲ್ಲಿ ಆಗಸ್ಟ್ 24ರಂದು ನಡೆಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದ ಡಾ. ಪುರುಷೋತ್ತಮ ಬಿಳಿಮಲೆ ಅವರು 'ಕನ್ನಡ ಭಾಷೆ ಮತ್ತು ಸಾಹಿತ್ಯಗಳಿಗೆ ಅಸಾಧಾರಣವಾದ ವ್ಯಾಪಕತೆ ಇದ್ದು ರಾಜ್ಯ ಹಾಗೂ ದೇಶದ ಗಡಿಯನ್ನು ಮೀರಿ ಜಾಗತಿಕ ಮಟ್ಟದಲ್ಲೂ ಸಮೃದ್ಧವಾಗಿ ಬೆಳೆಯಬಲ್ಲ ಸಾಮರ್ಥ್ಯ ಕನ್ನಡಕ್ಕಿದೆ ಎಂಬುದನ್ನು ಇತ್ತೀಚೆಗೆ ನಿಧನರಾದ ಡಾ. ಯು.ಆರ್. ಅನಂತಮೂರ್ತಿ ಅವರಂತಹ ದೊಡ್ಡ ಲೇಖಕರು ಸಾಧಿಸಿ ತೋರಿಸಿದ್ದಾರೆ. ಬೇರೆ ಬೇರೆ ದೇಶದ ವಿದ್ವಾಂಸರೂ ಕೂಡ ಅನಂತಮೂರ್ತಿ ಅವರ ಬರಹಗಳ ಅಧ್ಯಯನದಲ್ಲಿ ಆಸಕ್ತಿ ತೋರುವುದು ಇದಕ್ಕೆ ಸಾಕ್ಷಿ' ಎಂದು ಹೇಳಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದು 'ದೆಹಲಿ ಕರ್ನಾಟಕ ಸಂಘವು ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶದ ವ್ಯಾಪ್ತಿಯಲ್ಲಿರುವ ಕನ್ನಡ ಸಂಘಗಳ ಜೊತೆ ಸೇರಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಕನ್ನಡದ ಕಾರ್ಯಕ್ರಮಗಳಲ್ಲಿ ಎಲ್ಲಾ ಹೊರನಾಡ ಕನ್ನಡಿಗರನ್ನು ಹೆಚ್ಚು ಹೆಚ್ಚು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವ ಉದ್ದೇಶ ಹೊಂದಿದ್ದು ಮುಂದಿನ ದಿನಗಳಲ್ಲಿಯೂ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಆಯೋಜಿಸುವ ಯೋಚನೆ ನಮಗಿದೆ, ತಾವೆಲ್ಲರೂ ಇನ್ನೂ ಹೆಚ್ಚಿನ ಸಹಕಾರ ನೀಡಬೇಕು' ಎಂದು ಹೇಳಿದರು'.

ಜನಕಪುರಿ ಕನ್ನಡ ಕೂಟವು ಹಿರಿಯ ಕನ್ನಡಿಗರಾದ ಡಾ. ಎನ್.ವಿ. ಕಾಮತ್ ಅವರಿಗೆ ಕೂಟರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಕೂಟರತ್ನ ಪ್ರಶಸ್ತಿ ಸ್ವೀಕರಿಸಿದ ಡಾ. ಎನ್.ವಿ. ಕಾಮತ್ ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಕಾಮತ್ ಅವರು ತಮ್ಮ ಸೇವೆಯನ್ನು ಗುರುತಿಸಿ ಗೌರವಿಸಿದ್ದಕ್ಕಾಗಿ ಅಪಾರ ಸಂತೋಷವಾಗಿದೆ ಎಂದು ಹೇಳಿ ಜನಕಪುರಿ ಕನ್ನಡ ಕೂಟಕ್ಕೆ ಅಭಿನಂದನೆ ಹೇಳಿದರು. ಇದೇ ಸಂದರ್ಭದಲ್ಲಿ ದಿ. ಶ್ರೀ ಮಂಜುನಾಥ ಶೆಟ್ಟಿ ಅವರಿಗೂ ಮರಣೋತ್ತರವಾಗಿ 'ಕೂಟರತ್ನ ಪ್ರಶಸ್ತಿ' ಯನ್ನು ಪ್ರಕಟಿಸಲಾಯಿತು. ಈ ಪ್ರಶಸ್ತಿಯನ್ನು ಅವರ ಕುಟುಂಬದವರಿಗೆ ಆನಂತರ ತಲುಪಿಸುವುದಾಗಿ ತಿಳಿಸಲಾಯಿತು.

ಸಂಗೀತ ಲಹರಿ ಕಾರ್ಯಕ್ರಮವನ್ನು ನಡೆಸಿಕೊಟ್ಟ ಖ್ಯಾತ ಗಾಯಕಿ ಡಾ. ಜಯದೇವಿ ಜಂಗಮಶೆಟ್ಟಿ ಅವರು ಹಲವಾರು ಕನ್ನಡ ಗೀತೆಗಳನ್ನು ಮೃದುಮಧುರವಾಗಿ ಹಾಡಿ ಸಭಿಕರ ಪ್ರಶಂಸೆಗೆ ಪಾತ್ರರಾದರು. ಜನಕಪುರಿ ಕನ್ನಡ ಕೂಟದ ಮಹಿಳಾ ಮಂಡಳಿ ವತಿಯಿಂದ ಮಹಿಳೆಯರು ಹಾಗೂ ಮಕ್ಕಳಿಂದ ಹಾಡು, ನೃತ್ಯ, ನಾಟಕ ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಆನಂತರ ಜನಕಪುರಿ ಕನ್ನಡ ಕೂಟವು ಏರ್ಪಡಿಸಿದ್ದ ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಹಾಗೂ ಖ್ಯಾತ ಚಿತ್ರಕಲಾವಿದರಾದ ಶ್ರೀ ಜಿ.ಆರ್. ಈರಣ್ಣನವರು ಕೂಡಾ ಮಾತನಾಡಿ ಕಾರ್ಯಕ್ರಮದ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಜನಕಪುರಿ ಮಹಿಳಾ ಮಂಡಳಿಯ ಅಧ್ಯಕ್ಷರಾದ ಶ್ರೀಮತಿ ಮೀರಾನಾಡಿಗ್, ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೆ ಆಗಮಿಸಿದ್ದ ಗಣ್ಯರನ್ನು ಹಾಗೂ ಅತಿಥಿಗಳನ್ನು ಶ್ರೀ ಬಿ.ಕೆ. ಬಸವರಾಜು ಅವರು ಸ್ವಾಗತಿಸಿದರು. ಜನಕಪುರಿ ಕನ್ನಡ ಕೂಟದ ಕಾರ್ಯದರ್ಶಿ ಶ್ರೀ ಗಂಗಾಧರ್ ಅವರು ವಾರ್ಷಿಕ ವರದಿಯನ್ನು ಮಂಡಿಸಿದರು. ಕೂಟದ ಮಾಜಿ ಅಧ್ಯಕ್ಷರಾದ ಶ್ರೀ ಎಸ್.ಎಲ್. ಭಂಡಾರ್‌ಕರ್ ಕೂಟರತ್ನ ಪ್ರಶಸ್ತಿ ಪುರಸ್ಕೃತರ ಬಗ್ಗೆ ಪರಿಚಯ ಮಾಡಿಕೊಟ್ಟರು. ಜನಕಪುರಿ ಕನ್ನಡ ಕೂಟದ ಉಪಾಧ್ಯಕ್ಷರಾದ ಶ್ರೀ ಶ್ರೀಹರಿಯವರು ವಂದನಾರ್ಪಣೆ ಸಲ್ಲಿಸಿದರು. ಶ್ರೀಮತಿ ಅನಿತಾ, ಶ್ರೀಮತಿ ಲಾವಣ್ಯ ಹಾಗೂ ಶ್ರೀ ಚಂದ್ರಶೇಖರ್ ಕಾರ್ಯಕ್ರಮ ನಿರೂಪಿಸಿದರು. ಅ

*ಎನ್.ಪಿ. ಚಂದ್ರಶೇಖರ್*

### ಕೃಷಿಕ್ ಸರ್ವೋದಯ ಫೌಂಡೇಶನ್‌ನಿಂದ ಐಎಎಸ್ ಆಕಾಂಕ್ಷಿಗಳಿಗೆ ತರಬೇತಿ

# ಆಡಳಿತ ಸೇವೆಯಲ್ಲಿ ಕನ್ನಡಿಗರ ಸಂಖ್ಯೆ ಹೆಚ್ಚಬೇಕು

ಕೃಷಿಕ್ ಸರ್ವೋದಯ ಫೌಂಡೇಶನ್, ದೆಹಲಿ ಶಾಖೆ ಪ್ರತಿ ವರ್ಷದಂತೆ 2013–14 ಸಾಲಿನಲ್ಲೂ ಕೇಂದ್ರ ಲೋಕಸೇವಾ ಆಕಾಂಕ್ಷಿಗಳಿಗೆ ಅಣಕು ಸಂದರ್ಶನ, ಸಂವಾದ ಹಾಗೂ ಮತ್ತಿತರ ಕಾರ್ಯಕ್ರಮಗಳನ್ನು ನಡೆಸಿತು. ಭಾರತ ಆಡಳಿತ ಸೇವೆಯ (ಇಂಡಿಯನ್ ಎಡ್ಮಿನಿಸ್ಟ್ರೇಶನ್ ಸರ್ವೀಸಸ್–ಐಎಎಸ್) ಹಿರಿಯ ಅಧಿಕಾರಿಗಳಾದ ಡಾ. ಸುಭಾಷ್‌ಚಂದ್ರ ಕುಂಟಿಯಾ, ಶ್ರೀ ಅತುಲ್ ಕೆ. ತಿವಾರಿ, ಶ್ರೀ ಬಚ್ಚಿತ್ತರ್ ಸಿಂಗ್, ಶ್ರೀಮತಿ ಶಾರದಾ ಸುಬ್ರಹ್ಮಣ್ಯಂ, ಶ್ರೀ ಡಿ.ಎ.ವಿ. ಪ್ರಸಾದ್, ಶ್ರೀಮತಿ ವಿದ್ಯಾವತಿ, ಶ್ರೀ ಟಿ.ಎಸ್. ಕೃಪಾನಿಧಿ ಐ.ಡಿ.ಎ.ಎಸ್. (ನಿವೃತ್ತ), ಶ್ರೀ ನವೀನ್ ಕುಮಾರ್ ಐ.ಎಫ್.ಎಸ್., ಶ್ರೀ ಯಶಸ್ ಐ.ಎಫ್.ಎಸ್., ಶ್ರೀ ಶೊಯೆಬ್ ಕಲಾಲ್ ಐ.ಇ.ಎಸ್., ಶ್ರೀ ಯಶವಂತ್ ಕುಮಾರ್ ಐ.ಐ.ಎಸ್., ಕು. ಪುನಿತ ಐ.ಐ.ಎಸ್., ಶ್ರೀ ಅನಿಷ್ ಹೆಗ್ಡೆ ಐ.ಐ.ಎಸ್., ಡಾ. ಪುರುಷೋತ್ತಮ ಬಿಳಿಮಲೆ ಖ್ಯಾತ ವಿದ್ವಾಂಸರು, ಶ್ರೀ ಪಾಟೀಲ್, ಖ್ಯಾತ ಇತಿಹಾಸಕಾರರು, ಶ್ರೀ ಯಶ್ವಂತ್ ಗುರುಕಾರ್ ಐ.ಐ.ಎಂ., (ಬೆಂಗಳೂರು), ಶ್ರೀ ಎಸ್.ಎನ್. ಕಂಟಿಕರ್ ನ್ಯಾಯವಾದಿಗಳು, ಶ್ರೀ ಡಿ.ಎಸ್. ರಘು, ಸದಸ್ಯರು ಕೃಷಿ ಉತ್ಪನ್ನಗಳ ಬೆಲೆ ಆಯೋಗ, ಶ್ರೀ ಎನ್.ಎ. ಮಾಧವ, ಮೆರಿನ್ ಟೆಕ್ನಾಲೋಜಿಸ್ಟ್, ಡಾ. ವಿ.ಆರ್. ಗುಡ್ಡೇಗೌಡ, ಒ.ಎಸ್.ಡಿ. ಕಾಫೀ ಬೋರ್ಡ್, ನವದೆಹಲಿ ಅವರು ಸೇವಾಕಾಂಕ್ಷಿ ಅಭ್ಯರ್ಥಿಗಳಿಗೆ ಸಲಹೆಗಳನ್ನು ನೀಡಿ ಮಾರ್ಗದರ್ಶನ ಮಾಡಿದರು. ಸುಮಾರು 71 ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡರು.

ಜುಲೈ ತಿಂಗಳಿನಲ್ಲಿ ಯು.ಪಿ.ಎಸ್.ಸಿ, ಪ್ರಕಟಿಸಿದ ಫಲಿತಾಂಶದಲ್ಲಿ ಒಟ್ಟು 43 ಕನ್ನಡಿಗರು ರ್‍ಯಾಂಕ್ ಪಟ್ಟಿಯಲ್ಲಿದ್ದಾರೆಂದು ಕೃಷಿಕ್ ಸರ್ವೋದಯ ಫೌಂಡೇಶನ್ ದೆಹಲಿ ಶಾಖೆ ತಿಳಿಸಿತು.

ಭಾರತದ ಯಾವುದೇ ರಾಜ್ಯದ ಅಧಿಕಾರಿಗಳ ಪಟ್ಟಿಯನ್ನು ನೀವು ನೋಡಿದಾಗ ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್., (ಫಾರೆಸ್ಟ್) ಅಥವ ಮತ್ತಿತರ ಕೇಂದ್ರ ಲೋಕಸೇವೆಗಳಲ್ಲಿ ಉನ್ನತ ಸ್ಥಾನದಲ್ಲಿ ಉತ್ತರ ಭಾರತದವರು ಅಥವಾ ಬೇರೆ ರಾಜ್ಯದವರು ಹೆಚ್ಚಿರುವುದು ಅಥವಾ ಅಧಿಕಾರದ ಚುಕ್ಕಾಣಿಯನ್ನು ಹಿಡಿದಿರುವುದನ್ನು ನಾವು ಕಾಣಬಹುದು.





ಹನ್ನೆರಡು ವರ್ಷಗಳ ಹಿಂದಿನ ಯು.ಪಿ.ಎಸ್.ಸಿ, ರ್‍ಯಾಂಕ್ ಪಟ್ಟಿಯನ್ನು ನಾವು ಗಮನಿಸಿದರೆ ಕನ್ನಡಿಗರು ಕೇವಲ ಮೂರು ಅಥವಾ ನಾಲ್ಕು ಮಂದಿ ಉತ್ತೀರ್ಣರಾಗಿರುವುದನ್ನು ನಾವು ನೋಡಬಹುದು. ಅದೇ ವರ್ಷದಲ್ಲಿ ಬಿಹಾರ, ಉತ್ತರ ಪ್ರದೇಶ, ರಾಜಸ್ತಾನ, ತಮಿಳುನಾಡು ರಾಜ್ಯದವರು ಪ್ರತಿ ರಾಜ್ಯಕ್ಕೊಂದರಂತೆ 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ರ್‍ಯಾಂಕ್ ಪಟ್ಟಿಯಲ್ಲಿರುವುದನ್ನು ಕಾಣಬಹುದು. ಕಳೆದ ಆರೇಳು ವರ್ಷಗಳ ಯು.ಪಿ.ಎಸ್.ಸಿ, ಫಲಿತಾಂಶವನ್ನು ನೋಡಿದಾಗ ಸರಾಸರಿಯಾಗಿ ತೆಗೆದುಕೊಂಡರೆ ಪ್ರತಿ ವರ್ಷ 35 ಮಂದಿ ಕನ್ನಡಿಗರು ಉತ್ತೀರ್ಣರಾಗುತ್ತಿದ್ದರು. ಆದರೂ ಒಟ್ಟು ಭಾರತದ ಸಂದರ್ಭದಲ್ಲಿ ಕರ್ನಾಟಕಕ್ಕೆ ಸರಿಸಮಾನವಾದ ರಾಜ್ಯಗಳಿಗೆ ಹೋಲಿಕೆ ಮಾಡಿದಾಗ ಅಥವಾ ನೆರೆಹೊರೆಯ ದಕ್ಷಿಣ ರಾಜ್ಯಗಳೊಡನೆ ಹೋಲಿಕೆ ಮಾಡಿ ನೋಡಿದಾಗ ಈ ಕ್ಷೇತ್ರದಲ್ಲಿ ಕನ್ನಡಿಗರ ಸಾಧನೆ ನಗಣ್ಯವೆನಿಸುತ್ತದೆ. ಉದಾಹರಣೆಗೆ ರಾಜಸ್ತಾನದಲ್ಲಿ ಕನ್ನಡದ ಅಧಿಕಾರಿಗಳ ಸಂಖ್ಯೆ ಒಂದು ಅಥವಾ ಎರಡು ಅಷ್ಟೆ. ಅದೇ ಕರ್ನಾಟಕದಲ್ಲಿ ರಾಜಸ್ತಾನಿ ಅಧಿಕಾರಿಗಳ ಸಂಖ್ಯೆ 15ಕ್ಕೂ ಹೆಚ್ಚು. ಹಾಗೆಯೇ 2009ನೇ ಸಾಲಿನ ಯು.ಪಿ.ಎಸ್.ಸಿ. ಫಲಿತಾಂಶವನ್ನು ನಾವು ಗಮನಿಸಿದಾಗ ಒಟ್ಟು ಯು.ಪಿ.ಎಸ್.ಸಿ. ಪ್ರಕಟಿಸಿದ ಸುಮಾರು ಸಾವಿರ ರ್‍ಯಾಂಕ್‌ಗಳಲ್ಲಿ 127 ಕೇವಲ ತಮಿಳಿಗರೆ ಕಬಳಿಸಿರುವುದು ಅದೇ ಸಾಲಿನಲ್ಲಿ ಕನ್ನಡಿಗರು ಬರೀ 25ಕ್ಕೆ ಸಂತೋಷಪಟ್ಟಿರುವುದು ಕರ್ನಾಟಕದಂತಹ ಜ್ಞಾನಾಧಾರಿತ ರಾಜ್ಯದ ಮಟ್ಟಿಗೆ ಆಘಾತಕಾರಿಯಾದ ವಿಷಯ.

ಇತ್ತೀಚಿನ ವರ್ಷಗಳಲ್ಲಿ ತರಬೇತಿಗೆಂದು ದೆಹಲಿಗೆ ಬರುವ ಕನ್ನಡದ ಐ.ಎ.ಎಸ್. ಆಕಾಂಕ್ಷಿಗಳ ಸಂಖ್ಯೆ ಗಣನೀಯವಾಗಿ ವೃದ್ಧಿಸುತ್ತಿರುವುದು ಸಂತೋಷದ ವಿಷಯ. 2013–14ನೇ ಸಾಲಿನಲ್ಲಿ ದೆಹಲಿಗೆ ಐ.ಎ.ಎಸ್. ತರಬೇತಿಗೆಂದು ಬಂದ ಕನ್ನಡಿಗರ ಸಂಖ್ಯೆ ಸುಮಾರು 1500ಕ್ಕೂ ಹೆಚ್ಚಿದೆ ಎಂದು ತಿಳಿದುಬಂದಿದೆ. ಆದರೆ ನೂರಾರು ಸಂಖ್ಯೆಯಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳು ತರಬೇತಿ, ವಸತಿ ಮತ್ತು ಊಟದ ದುಬಾರಿ ವೆಚ್ಚವನ್ನು ಭರಿಸಲಾಗದ ದುಸ್ಥಿತಿಯಲ್ಲಿರುವುದು ವಿಷಾದದ ಸಂಗತಿ.

ಎಲ್ಲಾ ಸ್ವಯಂಸೇವಾ ಸಂಸ್ಥೆಗಳು, ಮಠಮಾನ್ಯಗಳು, ಕರ್ನಾಟಕ ಸರ್ಕಾರ, ಶಿಕ್ಷಣ ಸಂಸ್ಥೆಗಳು, ಧನಿಕರು, ಶಾಸಕರು, ಸಂಸದರು ಉದಾರ ಮನೋಭಾವದಿಂದ ಆಯಾ ಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿಭಾನ್ವಿತ ಹಾಗೂ ಅವಶ್ಯವಿರುವ ಗ್ರಾಮೀಣ ಭಾಗದ ಹಾಗೂ ನಗರಪ್ರದೇಶದ ಹಿಂದುಳಿದ ಐ.ಎ.ಎಸ್. ಆಕಾಂಕ್ಷಿಗಳನ್ನು ಗುರುತಿಸಿ ಅವರ ತರಬೇತಿ, ವಸತಿ, ಊಟದ ವ್ಯವಸ್ಥೆಯನ್ನು ಪ್ರಾಯೋಜಿಸಲು ದೃಢ ಸಂಕಲ್ಪದಿಂದ ಮುಂದೆ ಬಂದರೆ ಅದು ಕನ್ನಡಕ್ಕೆ ಸಲ್ಲಿಸಿದ ಅತ್ಯುತ್ತಮ ಸೇವೆ ಹಾಗೂ ಮಹದುಪಕಾರವಾಗುತ್ತದೆ.

ಈಗಾಗಲೇ ದೆಹಲಿಯಲ್ಲಿ ಕೇಂದ್ರ ಸರ್ಕಾರದ ವಿವಿಧ ಮಂತ್ರಾಲಯಗಳಲ್ಲಿ ಕೆಲಸ ಮಾಡಿದ ಶ್ರೀ ಎನ್.ಜೆ. ಕಾಮತ್ ಐ.ಸಿ.ಎಸ್. (ನಿವೃತ್ತ) ಶ್ರೀ ವಿ.ವಿ. ಭಟ್, ಐ.ಎ.ಎಸ್. (ನಿವೃತ್ತ), ಶ್ರೀ ಸಿ.ಎಸ್. ಕೇದಾರ್ ಐ.ಎ.ಎಸ್. (ನಿವೃತ್ತ), ಶ್ರೀ ತ.ಮ. ವಿಜಯಭಾಸ್ಕರ್ ಐ.ಎ.ಎಸ್., ಶ್ರೀ ಕೃಪಾನಿಧಿ ಐ.ಡಿ.ಎ.ಎಸ್. (ನಿವೃತ್ತ), ಶ್ರೀ ವಿ.ಪಿ. ಬಳಿಗಾರ್ ಐ.ಎ.ಎಸ್. ಮುಂತಾದ ಅಧಿಕಾರಿಗಳಿಂದ ಕೇಂದ್ರದ ವಿವಿಧ ಯೋಜನೆಗಳಲ್ಲಿ ಕನ್ನಡಕ್ಕೆ, ಕರ್ನಾಟಕಕ್ಕೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿಯೋ ಹೇಗೆ ಅನುಕೂಲವಾಗಿದೆ ಎಂಬುದನ್ನು ನಾವು ಸೂಕ್ಷ್ಮವಾಗಿ ಗಮನಿಸಿದಾಗ ಪ್ರತಿಯೊಬ್ಬ ಕನ್ನಡದ ಹಿರಿಯ ಅಧಿಕಾರಿ ಹೀಗೆ ಒಬ್ಬ ಕೇಂದ್ರದ ಕ್ಯಾಬಿನೆಟ್ ಮಂತ್ರಿಯಂತೆ ಕನ್ನಡಕ್ಕೆ ಹಾಗೂ ದೇಶಕ್ಕೆ ಕೆಲಸ ಮಾಡಬಹುದು ಎಂಬುದು ವೇದ್ಯವಾಗುತ್ತದೆ.


ಈ ನಿಟ್ಟಿನಲ್ಲಿ ವಿಳಂಬವಾಗದೆ ಅತೀ ಜರೂರಾಗಿ ಆಗಬೇಕಾದ ಕೆಲಸ ಬಹಳಷ್ಟಿವೆ. ಪ್ರತಿ ಕಾಲೇಜುಗಳಲ್ಲಿ ಯು.ಪಿ.ಎಸ್.ಸಿ. ಪರೀಕ್ಷೆಗಳ ಬಗ್ಗೆ ಕಮ್ಮಟಗಳನ್ನು (ವರ್ಕ್‌ಶಾಪ್) ಏರ್ಪಡಿಸುವುದು, ಕಾಲೇಜುಗಳ ಸೂಚನಾಫಲಕಗಳಲ್ಲಿ ಕಾಲದಿಂದ ಕಾಲಕ್ಕೆ ಯು.ಪಿ.ಎಸ್.ಸಿ. ಪ್ರಕಟಿಸುವ ನೋಟಿಫಿಕೇಶನ್‌ಗಳನ್ನು ಹಾಕುವುದು ಹಾಗೂ ವಿದ್ಯಾರ್ಥಿಗಳಲ್ಲಿ ಯು.ಪಿ.ಎಸ್.ಸಿ. ಪರೀಕ್ಷೆಗಳ ಬಗ್ಗೆ ಹಾಗೂ ಇಂಗ್ಲಿಷಿನ ಬಗ್ಗೆ ಇರುವ ಕೀಳರಿಮೆಗಳನ್ನು ಹೋಗಲಾಡಿಸಿ ಅವರಲ್ಲಿ ಆತ್ಮಸ್ಥೈರ್ಯ ತುಂಬುವುದು ಹಾಗೂ ಉನ್ನತ ಹುದ್ದೆಗಳಲ್ಲಿರುವ ಸಂವಿಧಾನಿಕ ಅಧಿಕಾರಗಳ ಬಗ್ಗೆ, ಹಾಗೂ ಅದರ ಮುಖೇನ ಹೇಗೆ ಒಂದು ವಿಸ್ತೃತವಾದ ಸಮಾಜಕ್ಕೆ ಹೆಚ್ಚಿನ ಸೇವೆ ಸಲ್ಲಿಸಬಹುದು ಎಂಬೆಲ್ಲಾ ವಿಚಾರಗಳನ್ನು ಮನೆಯಲ್ಲಿ ಮಕ್ಕಳಿಗೆ ಅರಿವನ್ನು ಮೂಡಿಸುವ ಪ್ರಯತ್ನವನ್ನು ಸತತವಾಗಿ ಮಾಡಲೇಬೇಕಾಗಿದೆ. 2013ನೇ ಸಾಲಿನಲ್ಲಿ ರ್‍ಯಾಂಕ್ ಪಟ್ಟಿಯಲ್ಲಿರುವ 43 ವಿದ್ಯಾರ್ಥಿಗಳಲ್ಲಿ ಸುಮಾರು 15ಮಂದಿ ಕನ್ನಡದಲ್ಲೇ ಬರೆದು ರ್‍ಯಾಂಕ್ ಪಡೆದಿದ್ದಾರೆ ಎಂಬುದು ಗಮನಾರ್ಹ.

ಈಗಾಗಲೇ ಕಳೆದ ಏಳೆಂಟು ವರ್ಷಗಳಿಂದ ಕೃಷಿಕ್ ಸರ್ವೋದಯ ಫೌಂಡೇಶನ್ ದೆಹಲಿ ಶಾಖೆ ಶ್ರೀ ಎನ್.ಎ. ಮಾಧವ, ಡಾ. ವಿ.ಆರ್. ಗುಡ್ಡೇಗೌಡ, ಡಾ. ಪುರುಷೋತ್ತಮ ಬಿಳಿಮಲೆಯವರ ಮುಂದಾಳತ್ವ ಹಾಗೂ ಮಾರ್ಗದರ್ಶನದಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡು ಕಾರ್ಯಮಗ್ನವಾಗಿದೆ. ಕನ್ನಡಕ್ಕೆ ಇನ್ನೂ ಹೆಚ್ಚು ರ್‍ಯಾಂಕ್‌ಗಳು ಬರಬೇಕು. ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲಿ ಎಲ್ಲಾ ಕೇಂದ್ರ ಸರ್ಕಾರದ ಇಲಾಖೆಗಳಲ್ಲಿ ಕನ್ನಡದ ಅಧಿಕಾರಿಗಳು ಇರಬೇಕು ಎಂಬ ಸದುದ್ದೇಶದಿಂದ ಶ್ರಮಿಸುತ್ತಾ ಕಟಿಬದ್ಧವಾಗಿದೆ. ಅ

*ಶ್ರೀನಿವಾಸ್ ಪಿ.ಸಿ.*

ಶ್ರದ್ಧಾಂಜಲಿ



# ಸಂಘದಲ್ಲಿ ಅನಂತ ಮೂರ್ತಿಯವರಿಗೆ ಶ್ರದ್ಧಾಂಜಲಿ

ಆಗಸ್ಟ್ 22ರಂದು ಬೆಂಗಳೂರಿನಲ್ಲಿ ನಿಧನರಾದ ಹಿರಿಯ ಸಾಹಿತಿ, ಬುದ್ಧಿಜೀವಿ ಪ್ರೊಫೆಸರ್ ಯು.ಆರ್. ಅನಂತಮೂರ್ತಿಯವರಿಗೆ ದೆಹಲಿ ಕರ್ನಾಟಕ ಸಂಘದಲ್ಲಿ ಆಗಸ್ಟ್ 23ರಂದು ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ದೆಹಲಿಯಲ್ಲಿ ನೆಲೆಸಿರುವ ಕನ್ನಡದ ಹಿರಿಯ ಸಾಹಿತಿಗಳೂ ವಿದ್ವಾಂಸರೂ ಆಗಿರುವ ಪ್ರೊ. ಎಚ್.ಎಸ್. ಶಿವಪ್ರಕಾಶ್ ಮತ್ತು ಡಾ. ಪುರುಷೋತ್ತಮ ಬಿಳಿಮಲೆ ಅವರು ಅನಂತಮೂರ್ತಿಯವರ ಕುರಿತು ಮಾತನಾಡಿ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಹಿರಿಯರಾದ ಶ್ರೀ ಐ. ರಾಮಮೋಹನ ರಾವ್ ಅವರು ಅನಂತಮೂರ್ತಿಯವರು ಜ್ಞಾನಪೀಠ ಪ್ರಶಸ್ತಿ ಪಡೆದ ಸಂದರ್ಭವನ್ನು ನೆನಪಿಸಿಕೊಂಡರು. ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಭೆಯನ್ನು ಉದ್ದೇಶಿಸಿ ಮಾತಾಡುತ್ತಾ ದೆಹಲಿ ಕರ್ನಾಟಕ ಸಂಘದ ಜತೆ ಅನಂತಮೂರ್ತಿ ಅವರು ಹಿಂದಿನಿಂದಲೇ ಬಹಳ ನಿಕಟವಾದ ಸಂಬಂಧವನ್ನು ಇಟ್ಟಿದ್ದರು ಎಂದರು. ಅನಂತ ಮೂರ್ತಿಯವರ ನಿಧನದ ನಂತರ ಕರ್ನಾಟಕದ ಕೆಲವೆಡೆ ಪಟಾಕಿ ಸಿಡಿಸಿ ಸಂಭ್ರಮಿಸಿದುದನ್ನು ದೆಹಲಿ ಕರ್ನಾಟಕ ಸಂಘವು ಖಂಡಿಸುತ್ತದೆ ಎಂದು ಶ್ರೀ ಬೆಳ್ಳಾರೆ ಅವರು ಹೇಳಿದರು.

ದೆಹಲಿಯ ಕನ್ನಡ ಸಾಹಿತ್ಯಾಸಕ್ತರು ಮತ್ತು ಸಂಘದ ಸದಸ್ಯರು ಅಗಲಿದ ಅನಂತಮೂರ್ತಿಯವರ ಭಾವಚಿತ್ರಕ್ಕೆ ಹೂದಳಗಳನ್ನು ಅರ್ಪಿಸಿ ಶ್ರದ್ಧಾಂಜಲಿಯನ್ನು ವ್ಯಕ್ತಪಡಿಸಿದರು. ಅ

# ಸಂಘದೊಂದಿಗೆ ಮಧುರ ಬಾಂಧವ್ಯ ಹೊಂದಿದ್ದ ಅನಂತಮೂರ್ತಿ

ಮೇರು ಸಾಹಿತಿ ಯು.ಆರ್. ಅನಂತಮೂರ್ತಿ ಅವರಿಗೆ ದೆಹಲಿ ಕರ್ನಾಟಕ ಸಂಘದೊಂದಿಗೆ ಮಧುರ ಬಾಂಧವ್ಯವಿತ್ತು. ಅವರು ದೆಹಲಿಯ ಎರಡು ಪ್ರತಿಷ್ಠಿತ ಸಂಸ್ಥೆಗಳ ಅಧ್ಯಕ್ಷರಾದ ಮೇಲೆ ಅದು ಇನ್ನಷ್ಟೂ ಗಟ್ಟಿಯಾಯಿತು. ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾದ ಅಧ್ಯಕ್ಷರಾಗಿ 1992ರಲ್ಲಿ ಮತ್ತು 1993ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿದ್ದ ಅವರು ಸಂಘದೊಂದಿಗೆ ನಿರಂತರ ಸಂಪರ್ಕ ಹೊಂದಿದ್ದರು.

ಬೇರೆ ಬೇರೆ ಕಾರಣಗಳಿಗೆ ಸಂಘದ ಮಾಜಿ ಅಧ್ಯಕ್ಷರುಗಳಾದ ದಿ.ಕೆ.ಆರ್. ನಾಗರಾಜ್, ಐ. ರಾಮಮೋಹನ ರಾವ್, ಡಾ. ಪುರುಷೋತ್ತಮ ಬಿಳಿಮಲೆ, ಮಾಜಿ ಉಪಾಧ್ಯಕ್ಷೆ ಶ್ರೀಮತಿ ಉಷಾ ಭರತಾದ್ರಿ ಮೊದಲಾದವರಿಗೆ ಮೊದಲಿನಿಂದಲೂ ಆಪ್ತರಾಗಿದ್ದರು.

ದಿ.ಕೆ.ಆರ್. ನಾಗರಾಜ್ ಅವರು ಅನಂತಮೂರ್ತಿ ಅವರ ಶಿಷ್ಯರಾಗಿದ್ದರು. ನ್ಯಾಯವಾದಿಗಳೂ ಆಗಿದ್ದ ನಾಗರಾಜ್ ಅವರು ನಿಧನರಾದಾಗ ಗಾಢ ಶೋಕ ವ್ಯಕ್ತಪಡಿಸಿದ ಅವರು 'ನನ್ನ ಕಾದಂಬರಿ 'ಅವಸ್ಥೆ' ಸಿನಿಮಾ ಆದಾಗ ಅದು ಪ್ರಕಟವಾಗದಂತೆ ಕೆಲವರು ಪ್ರಯತ್ನಿಸಿದರು. ನಾಗರಾಜ್ ನನ್ನ ಪರ ವಾದಿಸಿ ಗೆದ್ದರು' ಎಂದು ಸ್ಮರಿಸಿದ್ದಾರೆ. ನಾಗರಾಜ್ ಅವರು ಸಂಘದ ಅಧ್ಯಕ್ಷರಾಗಿದ್ದ ಕೊನೆಯ ದಿನಗಳಲ್ಲಿ ತಮಿಳು ಸಂಗಮ್‌ನ ಸಭಾಂಗಣದಲ್ಲಿ ಕನ್ನಡಕ್ಕೆ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ತಂದು ಕೊಟ್ಟ ಸಾಧಕರಿಗೆ ಅಭಿನಂದನೆ ಆಯೋಜಿಸಲಾಗಿತ್ತು. ಆ ದಿನ ಅನಂತಮೂರ್ತಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರಶಸ್ತಿ ವಿಜೇತ 'ದ್ವೀಪ' ಸಿನಿಮಾದ ನಿರ್ದೇಶಕ ಗಿರೀಶ್ ಕಾಸರವಳ್ಳಿ, ನಿರ್ಮಾಪಕಿ ಸೌಂದರ್ಯ, ಛಾಯಾಗ್ರಹಕ ಎಂ. ರಾಮಚಂದ್ರ, ರಾಜ್ಯದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ ಭಾಗವಹಿಸಿದ ಸ್ಮರಣೀಯ ದಿನವದು.

ಸಾಹಿತಿ ಡಾ. ಪುರುಷೋತ್ತಮ ಬಿಳಿಮಲೆ ಅವರು ದೆಹಲಿಗೆ ಬರುವ ಮೊದಲೇ ಅನಂತಮೂರ್ತಿ ಅವರಿಗೆ ಹತ್ತಿರವಾಗಿದ್ದರು. ಅವರ ನಡುವೆ ಇದ್ದ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ನಂತರ ಖಾಸಗಿಯಾದ ಬೆಚ್ಚನೆಯ ಸ್ನೇಹಕ್ಕೆ ತಿರುಗಿದ ವಿಶೇಷ ಬಗೆಯದು. ದಶಕದ ಹಿಂದೆ ಸಂಘದ ನೂತನ ಕಟ್ಟಡದ ಶುಭಾರಂಭಕ್ಕೆ ಅನಂತಮೂರ್ತಿಯವರನ್ನು ಬಿಳಿಮಲೆ ಆಹ್ವಾನಿಸಿದ್ದರು. ಆ ಸಂದರ್ಭದಲ್ಲಿ ಬರೆದ ಪತ್ರದಲ್ಲಿ ಅನಂತಮೂರ್ತಿ ಅವರು ಕನ್ನಡದ ಪ್ರಜ್ಞಾವಂತ ವಿಮರ್ಶಕರನ್ನು ಅಧ್ಯಕ್ಷರಾಗಿ ಹೊಂದಿರುವ ದೆಹಲಿ ಕರ್ನಾಟಕ ಸಂಘದ ಬಗೆಗೆ ಹರ್ಷ ವ್ಯಕ್ತಪಡಿಸಿದರು. ಉದ್ಘಾಟನಾ ಸಮಾರಂಭದ ಅಂಗವಾಗಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಅನಂತಮೂರ್ತಿ ಅವರು 'ರಾಜಧಾನಿಯಲ್ಲಿ ಕನ್ನಡ ಸಬಲೀಕರಣ' ಕುರಿತು ಮಾತನಾಡಿದರು. ಅವರು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಕೇಂದ್ರ ಆಗಬೇಕು ಎನ್ನುವ ಕನಸನ್ನು ಬಿತ್ತಿದ್ದು ಆಗಲೇ. ಅದು ಈಗ ಸಾಕಾರಗೊಳ್ಳುತ್ತಿರುವ ಈ ದಿನಗಳಲ್ಲಿ ಅವರಿಲ್ಲ ಎನ್ನುವುದು ವಿಷಾದಕರ. ಅನಂತಮೂರ್ತಿ ಅವರ ಆ ಭಾಷಣವನ್ನು ನಾನು ಬರಹರೂಪಕ್ಕೆ ತಂದೆ. ಅದು ಸಂಘ ಹೊರತಂದ 'ರಾಜಧಾನಿಯಲ್ಲಿ ಕರ್ನಾಟಕ' ಮತ್ತು ಅನಂತಮೂರ್ತಿಯವರ 'ಮಾತು ಸೋತ ಭಾರತ' ಕೃತಿಗಳಲ್ಲಿ ಪ್ರಕಟವಾಯಿತು.

ಕನ್ನಡಕ್ಕೆ ಆರನೇ ಜ್ಞಾನಪೀಠ ಪ್ರಶಸ್ತಿ (1994) ತಂದುಕೊಟ್ಟ ಅನಂತಮೂರ್ತಿಯವರನ್ನು ಅಂದಿನ ಪ್ರಧಾನಿ ಪಿ.ವಿ. ನರಸಿಂಹ ರಾವ್ ಅಭಿನಂದಿಸಿದ ಆ ಸಮಾರಂಭದಲ್ಲಿ ಸಂಘದ ಮಾಜಿ ಅಧ್ಯಕ್ಷರೂ, ಪ್ರಧಾನಿಗಳ ಮಾಧ್ಯಮ ಸಲಹೆಗಾರರೂ ಆಗಿದ್ದ ಐ. ರಾಮಮೋಹನ ರಾವ್ ಹತ್ತಿರದ ಸಾಕ್ಷಿಯಾಗಿ ಸಂಭ್ರಮಿಸಿದ್ದರು. ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿದ್ದ ದಿನಗಳಿಂದಲೂ ಅನಂತಮೂರ್ತಿ ಅವರು ರಾಮಮೋಹನ ರಾವ್ ಅವರೊಂದಿಗೆ ಆಪ್ತ ಸಂಬಂಧ ಹೊಂದಿದ್ದರು. ಯೋಗ್ಯ ಸಹಕಾರ ಮತ್ತು ಬೆಂಬಲಕ್ಕಾಗಿ ಆಗಾಗ ಭೇಟಿಯಾಗುವಂತೆ ಅನಂತಮೂರ್ತಿ ಬಯಸಿದ್ದರು, ಎಂದು ಈಚೆಗೆ ರಾಮಮೋಹನರಾವ್ ಸ್ಮರಿಸಿದ್ದಾರೆ.

ದೆಹಲಿ ಕರ್ನಾಟಕ ಸಂಘವು ಖ್ಯಾತ ಕವಿ, ನಾಟಕಕಾರ ಪ್ರೊ. ಎಚ್.ಎಸ್. ಶಿವಪ್ರಕಾಶ್ ಅವರಿಗೆ 2005ರಲ್ಲಿ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ನೀಡಿ ಗೌರವಿಸಿತು. ಆ ದಿನ ಭಾಗವಹಿಸಿದ ಅನಂತಮೂರ್ತಿ ಅವರು 'ಕನ್ನಡ ಸಾರಸ್ವತ ಲೋಕದಲ್ಲಿ ಅಡಿಗರ ನಂತರ ವಿಶ್ವಾತ್ಮಕ ಮೌಲ್ಯ ಹೊಂದಿದ ಕಾವ್ಯವನ್ನು ಸೃಷ್ಟಿಸಿದ ಕೀರ್ತಿ ಶಿವಪ್ರಕಾಶರಿಗೆ ಸಲ್ಲುತ್ತದೆ' ಎಂದು ಶ್ಲಾಘಿಸಿದ್ದರು. ಸಂಘವು ಎರಡು ಅನನ್ಯ ಪ್ರತಿಭೆಗಳ ಸಮ್ಮಿಲನಕ್ಕೆ ಸಾಕ್ಷಿಯಾಯಿತು ಎಂದು ಅಧ್ಯಕ್ಷರಾಗಿದ್ದ ಬಿಳಿಮಲೆಯವರು ಅಂದು ಬಣ್ಣಿಸಿದ್ದರು.

ಅನಂತಮೂರ್ತಿಯವರು ಕೊನೆಯ ಬಾರಿ ಸಂಘಕ್ಕೆ ಆಗಮಿಸಿದ್ದು ಫೆಬ್ರವರಿ 2010ರಲ್ಲಿ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಲೇಖಕಿ ಶ್ರೀಮತಿ ವೈದೇಹಿ ಅವರಿಗೆ ಸಂಘ ಅಭಿನಂದನಾ ಸಮಾರಂಭ ಆಯೋಜಿಸಿತ್ತು. ಈ ಕಾರ್ಯಕ್ರಮಕ್ಕೆ ಅಚ್ಚರಿಯ ಅತಿಥಿಯಾಗಿ ಕಾಣಿಸಿಕೊಂಡ ಅನಂತಮೂರ್ತಿ ಅವರನ್ನು ಕಂಡು ವೈದೇಹಿಯವರಿಗೆ ಖುಷಿಯಾಗಿ ಮಾತೇ ಹೊರಡಲಿಲ್ಲ. ಬೇರೆ ಕಾರ್ಯಕ್ರಮಕ್ಕೆ ದೆಹಲಿಗೆ ಬಂದಿದ್ದ ಅನಂತಮೂರ್ತಿಯವರನ್ನು ಕರೆ ತಂದವರು ಅವರ ಆಪ್ತ ಶಿಷ್ಯರಲ್ಲಿ ಒಬ್ಬರಾಗಿದ್ದ ಶ್ರೀ ಆರ್. ಭರತಾದ್ರಿ ಮತ್ತು ಆಗಿನ ಉಪಾಧ್ಯಕ್ಷೆ ಶ್ರೀಮತಿ ಉಷಾ ಭರತಾದ್ರಿ. ದೆಹಲಿಯ ದೂರದರ್ಶನ ಕೇಂದ್ರದಲ್ಲಿ ಹಿರಿಯ ಅಧಿಕಾರಿಯಾಗಿದ್ದ ಶ್ರೀ ಭರತಾದ್ರಿ ಅವರು ಅದಕ್ಕೂ ಮೊದಲು ಮಾಜಿ ಮುಖ್ಯಮಂತ್ರಿ ದಿ.ಜೆ.ಎಚ್. ಪಟೇಲ್ ಅವರ ಮಾಧ್ಯಮ ಸಲಹೆಗಾರರಾಗಿದ್ದರು. 'ಪಟೇಲ್–ಅನಂತಮೂರ್ತಿ ಸ್ನೇಹ ಐತಿಹಾಸಿಕವಾಗಿತ್ತು' ಎಂಬುದು ತಿಳಿದ ವಿಷಯ. ವೈದೇಹಿಯವರಿಗೆ ಹರ್ಷ ತಂದ ಮತ್ತು ನೆರದವರಿಗೆ ಪುಳಕ ಹಾಗೂ ಅಚ್ಚರಿಯೆನಿಸಿದ ಆ ಸಂಜೆ ಅನಂತಮೂರ್ತಿ ಹೇಳಿದ ಕೊನೆಯ ಮಾತು 'ತಡವಾದರೂ ವೈದೇಹಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಗೌರವ ಬಂದಿದೆ. ಅದೇ ಸಂತೋಷ'. ನಂತರ ಅನಂತಮೂರ್ತಿಯವರು ಸಂಘಕ್ಕೆ ಬಾರದಿದ್ದರೂ ಸಂಘದ ಹಿತೈಷಿಯಾಗಿ ಡಾ. ಬಿಳಿಮಲೆ ಮೊದಲಾದ ಆಪ್ತರೊಂದಿಗೆ ಇಲ್ಲಿನ ಬೆಳವಣಿಗೆ ಕುರಿತು ವಿಚಾರಿಸಲು ಮರೆಯುತ್ತಿರಲಿಲ್ಲ. ಅ



*ಡಾ. ವೈ ಅವನೀಂದ್ರನಾಥ್ ರಾವ್*

# ಸಂವಾದ ಸಂಸ್ಕೃತಿಯನ್ನು ಜಾಗೃತವಾಗಿಟ್ಟ ಡಾ. ಯು.ಆರ್. ಅನಂತಮೂರ್ತಿ

*ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಯು.ಆರ್. ಅನಂತಮೂರ್ತಿ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಹಿರಿಯ ಸಾಹಿತಿ* ***ಎಚ್.ಎಸ್. ಶಿವಪ್ರಕಾಶ್*** *ಅವರು ಮಾತಾಡಿದರು. ಅವರ ಸುದೀರ್ಘ ಭಾಷಣದ ಆಯ್ದ ಭಾಗ.*

ಅನಂತಮೂರ್ತಿಯವರ ಜತೆ ನನ್ನ ಸಂಬಂಧ ಆರಂಭವಾದುದು 1977ರಲ್ಲಿ. ಆಗ ಎಮರ್ಜೆನ್ಸಿ (ತುರ್ತುಪರಿಸ್ಥಿತಿ) ಇತ್ತು. ನನ್ನ ಗುರುಗಳಾದ ಲಂಕೇಶ್ ಅವರ ಜತೆ ನಾನಿದ್ದೆ. ಅನಂತಮೂರ್ತಿಯವರನ್ನು ನನಗೆ ಮೊದಲ ಸಲ ಪರಿಚಯ ಮಾಡಿದವರು ಲಂಕೇಶರು. ಅನಂತಮೂರ್ತಿಯವರು ಮತ್ತು ಲಂಕೇಶರು ಇಬ್ಬರೂ ಎಮರ್ಜೆನ್ಸಿಯ ವಿರುದ್ಧವಾಗಿದ್ದರು. ಲಂಕೇಶರು ಅನಂತಮೂರ್ತಿಯವರಿಗೆ ನನ್ನನ್ನು ಪರಿಚಯಿಸಿ, ಈತ ಇಂಥವರ ಮಗ, ಆದರೆ ಈತನಿಗೆ ಅವರ ಬಗ್ಗೆ ತುಂಬಾ ಸಿಟ್ಟು ಎಂದು ಹೇಳಿದರು. ಆಗ ಅವರು ಒಂದು ಅನಿರೀಕ್ಷಿತ ಪ್ರತಿಕ್ರಿಯೆ ನೀಡಿದರು. 'ಅಲ್ಲ ಲಂಕೇಶ್, ಈ ತಲೆಮಾರಿನ ಹುಡುಗರು ಹಿಂದಿಯಿನವರ ಬಗ್ಗೆ ಯಾಕೆ ಸಿನಿಕರಾಗಿರ್ತಾರೆ?' ಲಂಕೇಶರು ಮುಗುಳ್ನಕ್ಕರು. ನನಗೆ ಅವರ ಮೇಲೆ ಸಿಟ್ಟು ಬಂತು. 'ಸಂಸ್ಕಾರ'ದಂಥ ಕೃತಿಯನ್ನು ರಚಿಸಿ–ಪಳೆಯುಳಿಕೆಗಾರರನ್ನು ಎದುರು ಹಾಕಿಕೊಂಡಿದ್ದ ಅನಂತಮೂರ್ತಿಯವರಿಂದ ಈ ಮಾತನ್ನು ನಾನು ನಿರೀಕ್ಷಿಸಿರಲಿಲ್ಲ. ಆ ಸಂಪ್ರದಾಯ ವಿರೋಧಿ  ಅನಂತಮೂರ್ತಿ ಎಲ್ಲಿ? ಹೀಗೆ ಹಳೆಯದರ ಬಗ್ಗೆ ಸಹಾನುಭೂತಿಯಿರುವ ಈ ಅನಂತಮೂರ್ತಿ ಎಲ್ಲಿ? ಲಂಕೇಶ್ ಅವರು ಯಾವಾಗಲೂ ಭಿನ್ನಮತೀಯ. ಯಾವತ್ತೂ ಅವರು ವ್ಯವಸ್ಥೆಯ ಜತೆಗೆ ಹೋಗುತ್ತಿರಲಿಲ್ಲ. ಈ ಭಿನ್ನಮತದಿಂದ ಸಿಗುವ ಶಕ್ತಿ ಏನಿತ್ತೋ ಅದು ಲಂಕೇಶ್ ಅವರಿಗಿತ್ತು, ಅನಂತಮೂರ್ತಿಯವರು ಭಿನ್ನ ಮತವಿಟ್ಟುಕೊಂಡೇ ಅಧಿಕಾರಕ್ಕೆ ಹತ್ತಿರವಾಗಿದ್ದರು. ಲಂಕೇಶ್ ಅವರು ವ್ಯವಸ್ಥೆಯ ಬಗ್ಗೆ ಯಾವತ್ತೂ ರಾಜಿ ಮಾಡಿಕೊಳ್ಳಲಿಲ್ಲ.

ಅನಂತಮೂರ್ತಿಯವರು ಕೂಡಾ ಹತ್ತು ಜನರು ಹೇಳುವುದಕ್ಕಿಂತ ಭಿನ್ನವಾದ ಒಂದು ನಿಲುವನ್ನು ತೆಗೆದುಕೊಳ್ಳುತಿದ್ದರು. ನಮ್ಮಲ್ಲಿ ಅನೇಕರಿಗೆ ಇಲ್ಲದ ಧೈರ್ಯ, ಅನಂತಮೂರ್ತಿಯವರಿಗಿತ್ತು. ಎಮರ್ಜೆನ್ಸಿಯಲ್ಲಿ ಅವರು ಮಾತಾಡಿದರು. ಡಾ. ಕೆ. ಶಿವರಾಮ ಕಾರಂತರು ವಿರೋಧಿಸಿದರು. ಕವಿ ಗೋಪಾಲಕೃಷ್ಣ ಅಡಿಗರು ವಿರೋಧಿಸಿದರು. ಲಂಕೇಶ್ ಮತ್ತು ಅನಂತಮೂರ್ತಿಯವರು ಕೂಡಾ ವಿರೋಧಿಸಿದರು.

ಕರ್ನಾಟಕದಲ್ಲಿ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ, ಗೋಕಾಕ್ ಚಳವಳಿಯ ಸಂದರ್ಭದಲ್ಲಿ ಯಾರೂ ಕೂಡಾ ಡಾ. ರಾಜ್ ಕುಮಾರ್ ಅಭಿಮಾನಿ ಬಳಗದ ವಿರುದ್ಧ ಹೇಳಿಕೆ ಕೊಡಲು ಸಿದ್ಧರಿರಲಿಲ್ಲ. ಆಗ ಅನಂತಮೂರ್ತಿಯವರು ಹೇಳಿಕೆಯನ್ನು ಕೊಟ್ಟರು. ಪ್ರಜಾಪ್ರಭುತ್ವದಲ್ಲಿ ಯಾವುದೇ ರೀತಿಯ ದಾಂಧಲೆಯನ್ನು ಮಾಡಬಾರದು ಅಂತ ಧೈರ್ಯವಾಗಿ ಒಂದು ನಿಲುವನ್ನು ತೆಗೆದುಕೊಂಡಿದ್ದರು.

ಇತ್ತೀಚೆಗೆ, ನರೇಂದ್ರ ಮೋದಿಯವರು ಪ್ರಧಾನಮಂತ್ರಿಯಾದರೆ ದೇಶ ಬಿಟ್ಟು ಹೋಗುತ್ತೇನೆ ಅಂತ ಹೇಳಿದರು. ನನ್ನ ಪ್ರಕಾರ ಅದು ಸರಿಯಲ್ಲ. ಪ್ರಜಾಪ್ರಭುತ್ವದಲ್ಲಿ ಜನರು ಯಾರನ್ನು ಆರಿಸುತ್ತಾರೆ ಎಂಬ ಜನರ ಅಭಿಪ್ರಾಯವನ್ನು ಒಪ್ಪಿಕೊಳ್ಳಬೇಕು. ಆದರೆ ವೈಯಕ್ತಿಕವಾದರೂ ಆ ಅಭಿಪ್ರಾಯವನ್ನು, ಒಂದು ಅಲೆ ಎದ್ದೇಳುತ್ತಿದ್ದ ಸಂದರ್ಭದಲ್ಲಿ ತೆಗೆದುಕೊಳ್ಳುವಂತಹ ಧೀಶಕ್ತಿ, ಧೈರ್ಯ ಅನಂತಮೂರ್ತಿಯವರಿಗಿತ್ತು.

ಆದರೆ ಅನಂತಮೂರ್ತಿಯವರು ವ್ಯವಸ್ಥೆಯಲ್ಲಿ ಸೇರಿ ಕೂಡಾ ಒಳ್ಳೆಯ ಕೆಲಸಗಳನ್ನು ಬಹಳ ಸಲ ಮಾಡಿದ್ದಾರೆ. ಉದಾಹರಣೆಗೆ, ಅವರು ಕರ್ನಾಟಕದಲ್ಲಿ ಉಪಕುಲಪತಿ ಎಲ್ಲೂ ಆಗಲಿಲ್ಲ. ಕೇರಳದ ಕೊಟ್ಟಾಯಂನಲ್ಲಿರುವ ಮಹಾತ್ಮಾ ಗಾಂಧಿ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಅಲ್ಲಿ ಬಹಳಷ್ಟು ದೊಡ್ಡ ಬದಲಾವಣೆಗಳನ್ನು ತಂದರು. ಪಿಎಚ್‌ಡಿ ಪದವಿ ಇಲ್ಲದಿರುವ ಪ್ರತಿಭಾವಂತರಾದ ವಿನಯಚಂದ್ರನ್, ನರೇಂದ್ರ ಪ್ರಸಾದ್ ಮುಂತಾದವರನ್ನು ಅವರು ವಿಶ್ವವಿದ್ಯಾಲಯಕ್ಕೆ ಕರೆದು ನೇಮಿಸಿದರು. ನಿಯಮಗಳನ್ನು ಬದಿಗೊತ್ತಿ, ಯಾರು ಪ್ರತಿಭಾವಂತರು ಇದ್ದಾರೆಂದು ಗುರುತಿಸಿ ಇತಿಹಾಸದಲ್ಲಿ ಯಾರೂ ಮಾಡಿರದ ಹೊಸ ವಿಶ್ವವಿದ್ಯಾಲಯವನ್ನು ಕಟ್ಟುವ ಕೆಲಸವನ್ನು ಅವರು ಮಾಡಿದರು. ಮುಂದೆ ಅವರು ನ್ಯಾಷನಲ್ ಬುಕ್ ಟ್ರಸ್ಟ್‌ನ ನಿರ್ದೇಶಕರಾಗಿಯೂ ಕೂಡಾ ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದರು.

ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಅನಂತಮೂರ್ತಿ ಅವರು ಸಾಹಿತ್ಯಕ್ಕೆ ಕೊಡುಗೆಯನ್ನು ಕೊಟ್ಟಿದ್ದಾರೆ ಅಂತ ಬಹಳ ಜನರಿಗೆ ಗೊತ್ತು. ಆದರೆ ಅವರು ಸಾಹಿತ್ಯಿಕ ಸಂಸ್ಕೃತಿಗೆ ಮತ್ತು ಸಂಸ್ಥೆಗಳಿಗೆ ಏನು ಮಾಡಿದ್ದಾರೆ ಎನ್ನುವುದು ಬಹಳ ಜನರಿಗೆ ಗೊತ್ತಿಲ್ಲ. ಅನಂತಮೂರ್ತಿಯವರು ಸಾಹಿತ್ಯ ಅಕಾಡೆಮಿಯಲ್ಲಿದ್ದಾಗ ಮೊಟ್ಟಮೊದಲಿಗೆ ಅದನ್ನು ಪ್ರಜಾಸತ್ತಾತ್ಮಕ ಗೊಳಿಸಿದರು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಕೊಡುತ್ತಿದ್ದುದು ಸಂವಿಧಾನದ ಎಂಟನೇ ಪರಿಛೇಧದಲ್ಲಿರುವ ಪ್ರಧಾನ ಭಾಷೆಗಳ ಸಾಹಿತ್ಯ ಕೃತಿಗಳಿಗೆ ಮಾತ್ರ. ಅನಂತಮೂರ್ತಿಯವರು ಈ ದೇಶದಲ್ಲಿ ಸಾಹಿತ್ಯ ರಚನೆ ಕೇವಲ ಈ ಪ್ರಧಾನ ಭಾಷೆಯಲ್ಲಿ ಆಗ್ತಾ ಇಲ್ಲ, ಅನೇಕ ಆದಿವಾಸಿ ಭಾಷೆಗಳಲ್ಲಿ ಆಗ್ತಾ ಇದೆ. ಅಲ್ಪಸಂಖ್ಯಾತ ಭಾಷೆಗಳಲ್ಲಿ ಆಗ್ತಾ ಇದೆ, ಇಲ್ಲೂ ಒಳ್ಳೆಯ ಸಾಹಿತ್ಯ ಬರುತ್ತಾ ಇದೆ. ಇವರಿಗೆ ನಾವು ಪ್ರಶಸ್ತಿಯನ್ನು ಕೊಡಬೇಕು. ಸಾಹಿತ್ಯ ಅಕಾಡೆಮಿಯವರು ಭಾಷೆಗಳನ್ನು ಉಳಿಸೋಕೆ ಸಾಧ್ಯವಿಲ್ಲ. ಅದು ಸಂವಿಧಾನದಲ್ಲಿ ಮಾಡುವ ಬದಲಾವಣೆಯಿಂದ ಆಗಬೇಕು. ಅದು ಸರಕಾರದ ಕೆಲಸ. ಆದರೆ ಅಕಾಡೆಮಿಯು ಭಾಷೆಗಳನ್ನು



ಸಾಹಿತ್ಯದಲ್ಲಿ ಗುರುತಿಸಬಹುದು. ಹೀಗಾಗಿ ದೇಶದ ಅನೇಕ ಆದಿವಾಸಿ ಭಾಷೆಗಳಲ್ಲಿ ಬರೆದ ಸಾಹಿತ್ಯಗಳಿಗೆ ಮಾನ್ಯತೆ ಸಿಗುವ ಬಹಳ ದೊಡ್ಡ ಕೆಲಸವನ್ನು ಅನಂತಮೂರ್ತಿಯವರು ಮಾಡಿದರು. ಅವರು ಅಧ್ಯಕ್ಷರಾಗಿದ್ದಾಗಲೇ ತುಳುವಿಗೂ ಅಕಾಡೆಮಿ ಮನ್ನಣೆ ದೊರಕಿತು. ಹೀಗೆ ಅನಂತಮೂರ್ತಿಯವರು ಯಾವ ಸಂಸ್ಥೆಗೆ ಹೋದರೂ ಕೂಡಾ ಆ ಸಂಸ್ಥೆಯ ಗೌರವವನ್ನು ಹೆಚ್ಚಿಸುತ್ತಿದ್ದರು. ವ್ಯವಸ್ಥೆಯ ವಿರೋಧವಾಗಿ ಇದ್ದರೂ ತನಗೆ ಸ್ಥಾನಮಾನಗಳನ್ನು ಕೊಟ್ಟಾಗ ಅದನ್ನು ಸರಿಯಾಗಿ ನಿಭಾಯಿಸುವುದು ಅನಂತಮೂರ್ತಿಯವರ ಮಾರ್ಗವಾಗಿತ್ತು. ವಿರೋಧಿಸುವ ಮತ್ತು ಆಡಳಿತವನ್ನು ಮಾಡುವ ಎರಡೂ ಗುಣಾತ್ಮಕ ಅಂಶಗಳು ಅನಂತಮೂರ್ತಿಯವರಲ್ಲಿ ಇದ್ದುದನ್ನು ನಾವು ಗುರುತಿಸಬೇಕು.

ಅನಂತಮೂರ್ತಿಯವರು ಕನ್ನಡದ ಅತ್ಯಂತ ದೊಡ್ಡ ಬರಹಗಾರರಲ್ಲಿ ಒಬ್ಬರು. ಲಂಕೇಶರ ಗದ್ಯ ಒಂದು ರೀತಿಯ ಶಿಸ್ತನ್ನು, ಒಂದು ರೀತಿಯ ಮೊನಚನ್ನು, ಒಂದು ರೀತಿಯ ಕಾವನ್ನು ಕನ್ನಡ ಭಾಷೆಗೆ ಕೊಟ್ಟರೆ ಅನಂತಮೂರ್ತಿ ಅವರ ಗದ್ಯ ಒಂದು ರೀತಿಯ ಆದ್ರತೆಯನ್ನು, ಒಂದು ರೀತಿಯ ಅಲಂಕಾರವನ್ನು, ಒಂದು ರೀತಿಯ ಪರಿಮಳವನ್ನು ಕನ್ನಡಭಾಷೆಗೆ ತಂದಿತು. ವಿಮರ್ಶಕರಾಗಿ ಅವರು ಅಡಿಗರ ಕವನಗಳಿಗೆ ಮೊಟ್ಟಮೊದಲು ನವ್ಯ ಸಾಹಿತ್ಯದ ಸಂದರ್ಭದಲ್ಲಿ ಸ್ವೀಕೃತಿಯನ್ನು ತಂದುಕೊಟ್ಟರು. ಅವರು ಅದ್ಭುತ ಗದ್ಯ ಬರಹಗಾರರು.

ಅನಂತ ಮೂರ್ತಿಯವರು ಅದ್ಭುತ ವಾಗ್ಮಿ. ಯಾವುದೇ ವಿಷಯ ನನ್ನ ಪ್ರಕಾರ ಅನಂತಮೂರ್ತಿಯವರು ಶಿವರಾಮ ಕಾರಂತರಷ್ಟಾಗಲೀ ಅಥವಾ ಗೋಪಾಲಕೃಷ್ಣ ಅಡಿಗರಂತಹ ಹಳೇಹುಲಿಗಳಿದ್ದರೋ ಅಷ್ಟು ಅವರ ಓದಿನ ವಿಶಾಲತೆ ಇರಲಿಲ್ಲ. ಲಂಕೇಶರಷ್ಟು ಅನಂತಮೂರ್ತಿಯವರ ಓದಿನ ವಿಶಾಲತೆ ಇರಲಿಲ್ಲ. ಆದರೆ ಕಡಿಮೆ ಓದಿ ಅದರಿಂದ ಹೆಚ್ಚನ್ನು ಪಡೆದುಕೊಂಡು ಅದನ್ನು ಬಹಳ ಪ್ರಭಾವಶಾಲಿಯಾಗಿ ಅವರು ಬೇರೆಯವರಿಗೆ ತಿಳಿಸುತ್ತಿದರು. ಅವರು ಏನೋ ಒಂದು ಚಮತ್ಕಾರ ಮಾಡುತ್ತಿದ್ದರು. ಅನಂತಮೂರ್ತಿಯವರ ಭಾಷಣವನ್ನು ಕರ್ನಾಟಕದಲ್ಲಿ, ದೆಹಲಿಯಲ್ಲಿ ಮತ್ತು ವಿದೇಶದಲ್ಲಿ ಕೇಳಿದ್ದೇನೆ. ಎಲ್ಲಿ ಹೋದರೂ ಕೂಡಾ ಅವರು ತಮ್ಮ ಕೇಳುಗರನ್ನು ತಮ್ಮ ಒಳನೋಟಗಳಿಂದ, ಒಂದು ತೀಕ್ಷ್ಣವಾದ ದೃಷ್ಟಿಯಿಂದ ಮಂತ್ರಮುಗ್ಧರನ್ನಾಗಿಸುತ್ತಿದ್ದರು.

ಅನಂತಮೂರ್ತಿಯವರು ಕನ್ನಡಕ್ಕೆ ಮೂರ್ನಾಲ್ಕು ಅನನ್ಯವಾದ ಕಥೆಗಳನ್ನು ಕೊಟ್ಟಿದ್ದಾರೆ. ಅವರ 'ಸಂಸ್ಕಾರ' ಸಮಾಜದ ಮೇಲೆ ದೊಡ್ಡ ಪ್ರಭಾವವನ್ನು ಬೀರಿತು. ಆದರೆ ಅದರ ಮೌಲ್ಯಗಳ ಬಗ್ಗೆ ನನ್ನದೇ ಆದ ಸ್ವಂತ ಅಭಿಪ್ರಾಯಗಳಿವೆ. ಪ್ರಜ್ಞೆ ಮತ್ತು ಪರಿಸರದ ಅವರ ಬರಹಗಳು, ಗೋಪಾಲಕೃಷ್ಣ ಅಡಿಗರ ಕವನ ಸಂಕಲನ ಭೂಮಿಗೀತಕ್ಕೆ ಅವರು ಬರೆದ ಮುನ್ನುಡಿ ಅವರ ಶ್ರೇಷ್ಠ ವಿಮರ್ಶಾ ಲೇಖನಗಳು. ಒಂದು ಹೊಸ ರೀತಿಯ ಚಿಂತನೆಯನ್ನು, ಯುರೋಪಿಯನ್ ಸಾಹಿತ್ಯದ ವಿಶೇಷವಾಗಿ ಇಂಗ್ಲಿಷ್ ಸಾಹಿತ್ಯದ ಸೂಕ್ಷ್ಮತೆಯನ್ನು ಅನಂತಮೂರ್ತಿಯವರು ತಂದುಕೊಟ್ಟರು. ಜತೆಗೆ ಅವರು ಸಂಸ್ಕೃತ ಸಾಹಿತ್ಯದ ಪರಂಪರೆಯಿಂದಲೂ ಪಡೆದುಕೊಂಡಿದ್ದರು. ಸಂಸ್ಕೃತ ಶಬ್ದಗಳನ್ನು ಬಹಳ ನಿರರ್ಗಳವಾಗಿ, ಜತೆಗೆ ಆಡುಮಾತಿನ ಶಬ್ದಗಳ ಹೊಸ ಪ್ರಯೋಗವನ್ನು ಅನಂತಮೂರ್ತಿಯವರು ತಮ್ಮ ಗದ್ಯದಲ್ಲಿ ಮಾಡಿರುವುದು ವಿಶಿಷ್ಟವಾಗಿದೆ.

ಅನಂತಮೂರ್ತಿ ಅವರ ಪ್ರಾಮುಖ್ಯತೆ ಏನು ಅಂದರೆ ಒಂದು ಸಾಹಿತ್ಯಿಕ, ಸಾಂಸ್ಕೃತಿಕ ಸಂದರ್ಭದಲ್ಲಿ ಬಹು ಎಚ್ಚರದ ಗಂಟೆಯಾಗಿ ಅವರು ಕೆಲಸ ಮಾಡಿದ್ದಾರೆ. ಪ್ರಜಾಪ್ರಭುತ್ವದ ಮೇಲೆ ಯಾವುದೇ ರೀತಿಯ ಹಲ್ಲೆ ನಡೆದಾಗ ಅದನ್ನು ವಿರೋಧಿಸುತ್ತಿದ್ದರು. ಹಿಂದೆ ಸಮಾಜವಾದಿಯಾಗಿ ಕೆಳಜಾತಿಯವರ, ಅಲ್ಪ ಸಂಖ್ಯಾತರ ಮೇಲೆ ಯಾವಾಗ ಅನ್ಯಾಯ ಆಗುತ್ತಾ ಇತ್ತೋ ಆಗ ನಿರ್ಭೀತರಾಗಿ ಅವರು ಅದನ್ನು ವಿರೋಧಿಸುತ್ತಿದ್ದರು.

ಅವರು ಕೆಲವು ಸಲ ಪೊಲಿಟಿಕಲೀ ಇನ್‌ಕರೆಕ್ಟ್ ಅನ್ನಬಹುದಾದ ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದರು. ಉದಾಹರಣೆಗೆ ಚಂದ್ರಗುತ್ತಿಯ ಬೆತ್ತಲೆಪೂಜೆ ಬಗ್ಗೆ ದೊಡ್ಡ ವಿವಾದವಾಗಿತ್ತು. ಇದನ್ನು ಮಾಡಬಾರದು ಎಂದು ಆ ಪ್ರದೇಶದವರು ಗಲಾಟೆ ಮಾಡಿದರು. ಆಗ ಅನಂತಮೂರ್ತಿಯವರು 'ವೈ ನಾಟ್ ವರ್ಶಿಪ್ ನ್ಯೂಡ್' ಅಂತ ಲೇಖನ ಬರೆದರು. ಬೆತ್ತಲೆ ಪೂಜೆ ಆ ಜನರ ನಂಬಿಕೆ. ನಾವು ಯಾರು ಅದನ್ನು ವಿರೋಧಿಸಿವುದಕ್ಕೆ ಅಂತ. ನಾನು ಅದಕ್ಕೆ ಸಹಿ ಮಾಡಿದ್ದೆ. ಇನ್ನೊಂದು ಸಲ ಅನಂತಮೂರ್ತಿಯವರು ಜಾತಿ ಪದ್ಧತಿಯೆನ್ನುವುದು ಕೇವಲ ಶೋಷಣೆಯಲ್ಲ; ಜಾತಿ ಪದ್ಧತಿ ಒಂದು ರೀತಿಯ ಸೃಜನಾತ್ಮಕತೆ ಅಂತ ಅಂದರು. ಇದನ್ನು ಕೇಳಿದಾಗ ನನಗೆ ದಂಗು ಬಡಿದಂತಾಯಿತು. ತೇಜಸ್ವಿ ಮತ್ತು ಚಂಪಾರವರು ಅದಕ್ಕೆ ಕೆರಳಿದಾಗ ಪ್ರತಿಕ್ರಿಯೆಯನ್ನು ನೀಡಿದರು. ಆದರೆ ಅನಂತಮೂರ್ತಿಯವರು ಆನಂತರ ತಾನು ಜಾತಿ ಪದ್ಧತಿ ಮುಂದುವರಿಯಬೇಕು ಎಂದು ಹೇಳುತ್ತಿಲ್ಲ; ಆದರೆ ಆಧುನಿಕತೆಯಿಂದ ಎಲ್ಲಾ ಜಾತಿಯವರು ತಮ್ಮ ಕೌಶಲ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಅದರು ಇಂತಹ ಕೌಶಲ್ಯಗಳು ನಷ್ಟವಾಗುತ್ತಿರುವುದರ ಬಗ್ಗೆ ಮಾತಾಡಿದರು. ಹೀಗೆ ಅನಂತಮೂರ್ತಿಯವರು ಪ್ರವಾಹಕ್ಕೆ ವಿರುದ್ಧವಾಗಿ ಈಸುವಂತಹ ಧೈರ್ಯವನ್ನು ಹೊಂದಿದ್ದರು. ಅವರು ಸಂವಾದದ ಸಂಸ್ಕೃತಿಯನ್ನು ಜಾಗೃತವಾಗಿಟ್ಟರು. ದೇಶದಲ್ಲಿ ಪ್ರಜಾಸತ್ತಾತ್ಮಕವಾಗಿ ಒಂದು ಎಚ್ಚರದ ಗಂಟೆಯಾಗಿ ಕೆಲಸಮಾಡುವ ಸಾಮಾಜಿಕ ಜವಾಬ್ದಾರಿಯನ್ನು ಅವರು ನಿಭಾಯಿಸಿದರು. ಸಂವಾದದ ಸಂಸ್ಕೃತಿ ಪ್ರಜಾಪ್ರಭುತ್ವಕ್ಕೆ ಅಗತ್ಯವಾದುದು. ಅವರು ಸಾಹಿತ್ಯವನ್ನು ಪ್ರಜಾಸತ್ತಾತ್ಮಕ ಪ್ರತಿಕ್ರಿಯೆಯಾಗಿ, ಅಭಿವ್ಯಕ್ತಿಯಾಗಿ ಮತ್ತು ಲೋಕಕಲ್ಯಾಣದ ಹಾದಿಯನ್ನಾಗಿ ನೋಡಿದರು. ಇಂದು ಈ ಉತ್ತಮವಾದ ಸಾಹಿತ್ಯದ ಮೌಲ್ಯಗಳು ಲುಪ್ತವಾಗುತ್ತಿವೆ.

ನೆನಗೂ ಅನಂತಮೂರ್ತಿಯವರಿಗೂ ಬಹಳಷ್ಟು ಜಗಳಗಳಾಗಿವೆ. ಇತ್ತೀಚೆಗಂತೂ ನಾವು ಮಾತಾಡುತ್ತಲೂ ಇರಲಿಲ್ಲ. ಕೆಲವು ತಿಂಗಳ ಹಿಂದೆ ನಾನು ಫೋನಲ್ಲಿ ಮಾತಾಡುವಾಗ ಹೇಳಿದರು, 'ನೋಡಯ್ಯಾ, ನನಗೂ ನಿನಗೂ ಬಹಳಷ್ಟು ಜಗಳ ಆಗಿದೆಯಯ್ಯಾ. ನೀನು ಬರಬೇಕಯ್ಯ ಒಂದು ಸಲ. ಜಗಳವನ್ನೆಲ್ಲಾ ನಾವು ಸರಿಮಾಡಬೇಕಯ್ಯ.' ವಿರೋಧ ಮಾಡಿದಾಗಲೂ ಅನಂತಮೂರ್ತಿಯವರಲ್ಲಿ ಪ್ರಾಮಾಣಿಕತೆಯಿತ್ತು. ಕರ್ನಾಟಕದ ಮಾತ್ರವಲ್ಲ ಭಾರತದ ಒಂದು ಸಂದರ್ಭದಲ್ಲಿ ಅನಂತಮೂರ್ತಿಯವರ ಸಾವಿನಿಂದ ಉಂಟಾದ ಖಾಲಿ ಜಾಗವನ್ನು ತುಂಬುವುದು ಬಹಳ ಕಷ್ಟ ಇದೆ. ಅ

***ಎಚ್.ಎಸ್. ಶಿವಪ್ರಕಾಶ್***

## ದೆಹಲಿಯ ಕನ್ನಡ ಪತ್ರಕರ್ತರಿಂದ ಅನಂತಮೂರ್ತಿ ಅವರಿಗೆ ಶ್ರದ್ಧಾಂಜಲಿ

ಕರ್ನಾಟಕದ ಬೇರೆ ಬೇರೆ ಪತ್ರಿಕೆಗಳಿಗೆ ಮತ್ತು ಟಿವಿ ಚಾನೆಲ್‌ಗಳಿಗೆ ದೆಹಲಿಯಲ್ಲಿದ್ದು ಕೆಲಸ ಮಾಡುತ್ತಿರುವ ಕನ್ನಡದ ಹಿರಿಯ ಮತ್ತು ಕಿರಿಯ ಪತ್ರಕರ್ತರು ಆಗಸ್ಟ್ 27, 2014ರಂದು ದೆಹಲಿಯ ಸೌತ್ ಅವೆನ್ಯೂನಲ್ಲಿರುವ ಲೋಕ ಸಭಾಸದಸ್ಯ ಶ್ರೀ ಶಿವಕುಮಾರ ಉದಾಸಿ ಅವರ ಮನೆಯಲ್ಲಿ ಸೇರಿ ಈಚೆಗೆ ತೀರಿಕೊಂಡ ಯು. ಆರ್. ಅನಂತಮೂರ್ತಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು.

ಅನಂತಮೂರ್ತಿ ಅವರು ನಾಡಿನಾದ್ಯಂತ ಗೆಳೆಯರನ್ನು ಹೊಂದಿದ್ದು, ಅದರಲ್ಲೂ ಹೊಸ ತಲೆಮಾರಿನ ಅನೇಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವರನ್ನು ಪ್ರಗತಿ ಪಥದಲ್ಲಿ ಮುನ್ನಡೆಯುವ ಹಾಗೆ ಮಾಡಿದ್ದನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ನೆನಪಿಸಿಕೊಳ್ಳಲಾಯಿತು. ಜೊತೆಗೆ ಕೋಮುವಾದದ ವಿರುದ್ಧ ಅವರು ಕೊನೆವರೆಗೆ ಧ್ವನಿ ಎತ್ತಿದ್ದನ್ನು ಕೂಡಾ ಸ್ಮರಿಸಿಕೊಳ್ಳಲಾಯಿತು.

ಹಿರಿಯ ಪತ್ರಕರ್ತ ಶ್ರೀ ಡಿ. ಉಮಾಪತಿಯವರು ಮಾತಾಡಿ, ಅನಂತಮೂರ್ತಿಯವರು ಒಬ್ಬ ಸಾರ್ವಜನಿಕ ಬುದ್ಧಿ ಜೀವಿಯಾಗಿ ತನ್ನ ಕಾಲದ ಅಗತ್ಯಗಳನ್ನು ಹೇಗೆ ಸಮರ್ಪಕವಾಗಿ ಪೂರೈಸಿದರು ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಡಾ. ಪುರುಷೋತ್ತಮ ಬಿಳಿಮಲೆಯವರು ಮಾತಾಡುತ್ತಾ 'ಅನಂತಮೂರ್ತಿ ಅವರು ಶತಮಾನಗಳಿಂದ ಬೆಳೆದು ಬಂದ ಬ್ರಾಹ್ಮಣ್ಯವನ್ನು ಬದಲಾಗುತ್ತಿರುವ ಆಧುನಿಕ ಸಂದರ್ಭದಲ್ಲಿ ಇರಿಸಿ ಸಂಸ್ಕಾರ ಕಾದಂಬರಿ ಬರೆದರು, ಇಂಥ ಕೆಲಸಗಳನ್ನು 19–20ನೆಯ ಶತಮಾನದ ಉದೀಯಮಾನ ಮಧ್ಯಮ ವರ್ಗದ ವಿದ್ಯಾವಂತ ವರ್ಗ ಮಾಡುತ್ತಾ ಬಂದಿರುವುದು ಹೌದಾದರೂ ಅನಂತಮೂರ್ತಿ ಅವರಿಗಿಂತ ಭಿನ್ನವಾಗಿದ್ದರು ಯಾಕೆಂದರೆ ಅವರಿಗೆ ಬ್ರಾಹ್ಮಣೇತರ ಸಂಸ್ಕೃತಿಯ ಬಗೆಗೆಯೂ ತಿಳುವಳಿಕೆ ಇತ್ತು' ಎಂದು ಸಾಧಾರವಾಗಿ ವಿಶ್ಲೇಷಿಸಿದರು. ಅ

# ಡಾ. ಯು.ಆರ್. ಅನಂತಮೂರ್ತಿ
# ಕರ್ನಾಟಕದ ಜೀವ ಚೈತನ್ಯವನ್ನು ಕ್ರಿಯಾಶೀಲಗೊಳಿಸುತ್ತಲೇ ಬದುಕಿದ ಮಹಾನುಭಾವ

*ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಯು.ಆರ್. ಅನಂತಮೂರ್ತಿ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಹಿರಿಯ ವಿದ್ವಾಂಸ* ***ಡಾ. ಪುರುಷೋತ್ತಮ ಬಿಳಿಮಲೆ*** *ಅವರು ಮಾತಾಡಿದರು. ಅವರ ಭಾಷಣದ ಬರಹರೂಪ ಅಭಿಮತದ ಓದುಗರಿಗೆ.*

ಅನಂತಮೂರ್ತಿ ಅವರೊಡನೆಯ ನನ್ನ ಸ್ನೇಹ 80ರ ದಶಕದಷ್ಟು ಹಿಂದೆ ಹೋಗುತ್ತದೆ. ಒಮ್ಮೆ ಉಡುಪಿಯ ಕು.ಶಿ. ಹರಿದಾಸ ಭಟ್ಟರು ತಮಾಷೆ ನೋಡಲೆಂದೋ ಏನೋ, ನನ್ನನ್ನು ಮತ್ತು ಅನಂತಮೂರ್ತಿಯರನ್ನು ಇಬ್ಬರನ್ನೇ ಎಂ.ಜಿ.ಎಂ. ಕಾಲೇಜಿನ ರವೀಂದ್ರ ಕಲಾ ಮಂಟಪದ ಸ್ಟೇಜಿನಲ್ಲಿ ಕುಳ್ಳಿರಿಸಿ ಒಂದೊಂದು ಘಂಟೆ ಮಾತಾಡಿ ಅಂದಿದ್ದರು. ನಾನು ಜಾನಪದ ಲೋಕ ದೃಷ್ಟಿಯ ಬಗ್ಗೆ ಮಾತಾಡುತ್ತಾ ಹೇಗೆ ಜಾನಪದ ಲೋಕ ದೃಷ್ಟಿಯು ವೈದಿಕ ಲೋಕದೃಷ್ಟಿಗಿಂತ ಭಿನ್ನವಾಗಿದೆ ಎಂದು ವಾದಿಸಿದೆ. ಅದನ್ನು ಸಮರ್ಥಿಸಲು ವೈದಿಕರ ಸಪಿಂಡೀಕರಣ ಶ್ರಾದ್ಧವನ್ನೂ, ಬ್ರಾಹ್ಮಣೇತರರ 16 ಕುಲೆಗಳ ಪರಿಕಲ್ಪನೆಯನ್ನೂ ವಿವರಿಸಿ, ಭಾರತೀಯ ಸಂಸ್ಕೃತಿಯ ಒಟ್ಟಾರೆ ವ್ಯಾಖ್ಯಾನದಲ್ಲಿ ಬ್ರಾಹ್ಮಣೇತರರಿಗೆ ಸ್ಥಾನವನ್ನೇ ನೀಡಿಲ್ಲ ಎಂದು ಆಕ್ಷೇಪಿಸಿದೆ. ಕೊನೆಯಲ್ಲಿ 'ಅನಂತಮೂರ್ತಿವರಂಥ ಚಿಂತಕರಿಗೂ ಇದು ಅರ್ಥವಾಗುತ್ತಿಲ್ಲ. ಅವರು ಶ್ರೀ ಪೇಜಾವರ ಸ್ವಾಮಿಗಳು ಸ್ಥೂಲವಾಗಿ ಹೇಳಿದ್ದನ್ನೇ ತುಂಬಾ ನಾಜೂಕಾಗಿ ನಮಗೆ ಹೇಳುತ್ತಿದ್ದಾರೆ' ಎಂದು ಕುಳಿತುಬಿಟ್ಟೆ. ಅಲ್ಲಿವರೆಗೆ ತಲೆದೂಗುತ್ತಿದ್ದ ಅನಂತಮೂರ್ತಿಯವರು ಕೊನೆ ಸಾಲನ್ನು ಕೇಳುತ್ತಲೇ ಸಿಟ್ಟಿಗೆದ್ದರು. 'ಇದು ತುಂಬಾ ಅಹಂಕಾರದ ಮಾತು ಬಿಳಿಮಲೆ' ಎಂದ ಅವರು ನನ್ನನ್ನು ತರಾಟೆಗೆ ತೆಗೆದುಕೊಂಡು, ತಾನು ಬ್ರಾಹ್ಮಣನಾದರೂ ಜೀವನದುದ್ದಕ್ಕೂ ಹೇಗೆ ಬ್ರಾಹ್ಮಣ್ಯದ ವಿರುದ್ಧ ಹೋರಾಟ ಮಾಡಿಕೊಂಡು ಬಂದೆ ಎಂಬುದನ್ನು ಅನೇಕ ಉದಾಹರಣೆಗಳ ಮೂಲಕ ವಿವರಿಸಿ, ಇಂಥ ದ್ವಂದ್ವಗಳೇ ಸೃಜನಶೀಲತೆಗೆ ಇಂಬುಕೊಡುತ್ತವೆ' ಎಂದರು. ಅವರ ಮಾತಿನ ಮೋಡಿಗೆ ಮರುಳಾದ ನಾನು ಕಾರ್ಯಕ್ರಮದ ಕೊನೆಯಲ್ಲಿ, 'ನನ್ನ ಕೊನೆ ವಾಕ್ಯವನ್ನು ಹಿಂದೆಗೆದುಕೊಳ್ಳುತ್ತೇನೆ' ಎಂದೆ. ಅವರು ತಕ್ಷಣ ಎದ್ದು... 'ಇಲ್ಲಪ್ಪಾ.. ನಿನ್ನ ಭಾಷಣದಿಂದ ನಾನು ತುಂಬಾ ಕಲಿತುಬಿಟ್ಟೆ, ನನ್ನ ಭಾಷಣದ ಮೊದಲ ವಾಕ್ಯವನ್ನು ನಾನೂ ಹಿಂದೆಗೆದುಕೊಳ್ಳುತ್ತೇನೆ' ಅಂದರು. ಇದಾದ ಸುಮಾರು 25 ವರ್ಷಗಳ ಆನಂತರ ನಾನು ದೆಹಲಿಯಲ್ಲಿ 'where there is no pitr and punrjanmam-study of a Dalit funeral rites' ಎಂಬ ಹೆಸರಿನ ಪ್ರಬಂಧ ಮಂಡಿಸಿದಾಗ ಅನಂತಮೂರ್ತಿ ಅವರು ಪತ್ನಿ ಎಸ್ತರ್ ಜೊತೆಗೆ ಬಂದು ಸಭೆಯಲ್ಲಿ ಕುಳಿತಿದ್ದರು, ತನ್ನ ಕೆಲವು ದೆಹಲಿ ಗೆಳೆಯರನ್ನೂ ಕರೆತಂದಿದ್ದರು. 'ನಿನ್ನ ಉಡುಪಿ ಭಾಷಣ ಇನ್ನೂ ನೆನಪಿದೆ.. ಬಿಳಿಮಲೆ, ಈಗ ಅದು ತುಂಬ ಪಕ್ವವಾಗಿದೆ' ಅಂದು ಬೆನ್ನು ತಟ್ಟಿದರು. ನಾನು ತುಂಬಾ ನಾಚಿಕೊಂಡೆ.



ಹೀಗೆ ಅವರ ಜೊತೆಗಣ ನನ್ನ ಸ್ನೇಹ ಜಗಳದಿಂದ ಆರಂಭವಾಗಿತ್ತು. ಅವರು ತುಂಬಾ ದೊಡ್ಡವರಾಗಿದ್ದರು, ಅವರ ಮುಂದೆ ನಾನೇನೂ ಅಲ್ಲ. 1990ರಲ್ಲಿ ನನ್ನ ಕರಾವಳಿ ಜಾನಪದ ಪ್ರಕಟವಾದಾಗ ಅವರು ಕೇರಳದಲ್ಲಿ ಕುಲಪತಿಗಳಾಗಿದ್ದರು, ಆದರೂ ಪುಸ್ತಕ ಓದಿ ನಾಲ್ಕು ಪುಟಗಳ ಪತ್ರ ಬರೆದಿದ್ದರು. ಈ ಪುಸ್ತಕ ಇಂಗ್ಲಿಷಿನಲ್ಲಿ ಬರಬೇಕು' ಅಂತ ಬರೆದಿದ್ದರು. ನಾನು ಕರ್ನಾಟಕ ಸಂಘದ ಅಧ್ಯಕ್ಷನಾಗಿ ಆಯ್ಕೆಯಾದಾಗ ಫೋನ್ ಮಾಡಿದ್ದರು, ಅಭಿನಂದಿಸಿ ಪತ್ರ ಬರೆದಿದ್ದರು. ಕಳೆದ ಕೆಲವು ವರ್ಷಗಳಿಂದ ಅವರ ಕಿಡ್ನಿಗಳು ಸೋಲುತ್ತಾ ಹೋಗುತ್ತಿದ್ದುವು. ನನ್ನದೂ ಹಾಗಾಗುತ್ತಿತ್ತು. ಈ ಸಮಾನ ದುಃಖ ನಮ್ಮನ್ನು ಇನ್ನೂ ಹತ್ತಿರಕ್ಕೆ ಎಳೆದು ತಂದಿತು. ನಾನು ಆಸ್ಪತ್ರೆ ಸೇರುವ ಹಿಂದಿನ ದಿನ ತುಂಬ ಹೊತ್ತು ಮಾತಾಡಿದ್ದರು. ಕಿಡ್ನಿ ದಾನ ಮಾಡಿದ ನನ್ನ ಪತ್ನಿಯ ಬಗೆಗೆ ಅತ್ಯಂತ ಗೌರವ ಪ್ರಕಟ ಮಾಡಿದರು. ಅವರ ಕೊನೆ ಕೊನೆಯ ದಿನಗಳಲ್ಲಿ ನಾವು ಸಾಹಿತ್ಯದ ಬಗ್ಗೆ ಮತಾಡುತ್ತಿರಲಿಲ್ಲ. ಕಿಡ್ನಿ, ಕ್ರಿಯೇಟಿನೈನ್, ಕ್ಯಾಲ್ಷಿಯಂ.. ಹೀಗೆ ನಾವು ವೈದ್ಯಕೀಯ ಪರಿಭಾಷೆಗಳಲ್ಲಿ ಮುಳುಗಿ ಹೋಗುತ್ತಿದ್ದೆವು.

ಹೀಗೆ ಅನಂತಮೂರ್ತಿಯವರು ನನ್ನ ಜೊತೆ ಹೇಗೋ ಹಾಗೆ ಇಡೀ ಕರ್ನಾಟಕದ ಜೊತೆ ಸಂಬಂಧ ಸಾಧಿಸಿಕೊಂಡಿದ್ದರು. ಕಳೆದ ಅರ್ಧ ಶತಮಾನದ ಕಾಲ ಕರ್ನಾಟಕದ ಜೀವ ಚೈತನ್ಯವನ್ನು ಕ್ರಿಯಾಶೀಲಗೊಳಿಸುತ್ತಲೇ ಅವರು ಬದುಕಿದರು. ತಾವು ಬದುಕುತ್ತಿರುವ ಸಮಾಜವನ್ನು ಸಮಗ್ರವಾಗಿ ಪರಿಭಾವಿಸುವ ಶಕ್ತಿ ಅವರಿಗಿತ್ತು. ಅದ್ವೈತ, ದ್ವೈತ. ಇಸ್ಲಾಂ, ಕ್ರಿಶ್ಚಿಯಾನಿಟಿ, ಬ್ರಾಹ್ಮಣ, ಶೂದ್ರ, ದಲಿತರು, ಇತಿಹಾಸ ವರ್ತಮಾನಗಳನ್ನೆಲ್ಲ ಒಂದು ಜನಪರವಾದ ಚೌಕಟ್ಟಿನಲ್ಲಿರಿಸಿ ವಿಶ್ಲೇಷಿಸುವ ಅಸಾಧಾರಣ ಸಾಮರ್ಥ್ಯವನ್ನು ಅವರು ಪಡೆದಿದ್ದರು. ಈ ಶಕ್ತಿಯೇ ಅವರನ್ನು ಕೋಮುವಾದಿಗಳಿಂದ ದೂರವಿರುವಂತೆ ಮಾಡಿತು. ಅವರಿಗೆ ಸಂವಾದದಲ್ಲಿ ಆಸಕ್ತಿಯಿತ್ತು, ಸಂಘರ್ಷದಲ್ಲಿ ಅಲ್ಲ.

ಅವರು ಬರೆದ ಸಂಸ್ಕಾರ, ಭಾರತೀಪುರ, ಅವಸ್ಥೆ ಯಂಥ ಕಾದಂಬರಿಗಳು, ಪ್ರಜ್ಞೆ ಮತ್ತು ಪರಿಸರ, ಪೂರ್ವಾಪರದಂತ ವಿಮರ್ಶಾ ಕೃತಿಗಳು, ಮೌನಿ, ಪ್ರಶ್ನೆ, ಘಟಶ್ರಾದ್ಧದಂಥ ಸಣ್ಣ ಕತೆಗಳ ಸಂಕಲನ, ಅಜ್ಜನ ಹೆಗಲ ಸುಕ್ಕುಗಳು ಕವನಸಂಕಲನ, ಕನ್ನಡ ಸಾಹಿತ್ಯದ ಘನತೆಯನ್ನು ನಿರ್ವಿವಾದವಾಗಿ ಹೆಚ್ಚಿಸಿವೆ. ಇದರ ಜೊತೆಗೆ ಅವರು ಅಡಿಗರ ಭೂಮಿಗೀತೆಯೂ ಸೇರಿದಂತೆ ಅನೇಕ ಕೃತಿಗಳಿಗೆ ಬರೆದ ಮುನ್ನುಡಿಗಳು ಕನ್ನಡ ಸಾಹಿತ್ಯ ಪರಂಪರೆಯ ಶಕ್ತಿಯನ್ನು ಹೆಚ್ಚಿಸಿವೆ. ಅನಂತಮೂರ್ತಿ ಅವರು ಮಾಡಿದ ಭಾಷಣಗಳದ್ದೇ ಒಂದು ಪ್ರತ್ಯೇಕ ಲೋಕ. ಕನ್ನಡದ ಹಿರಿಯ ಕಿರಿಯ ಸಾಹಿತಿಗಳೊಡನೆ ಅವರು ಸಾಧಿಸಿಕೊಂಡ ಸಂಬಂಧಗಳು ಅತ್ಯಂತ ಸುಮಧುರವಾದುದು. ಕನ್ನಡ ಭಾಷೆಯು ಅವರ ಕೈಯಲ್ಲಿ ಹೊಸ ಅರ್ಥ ಮತ್ತು ವಿಸ್ತಾರವನ್ನು ಪಡೆದುಕೊಂಡಿತು. ಜಗಲಿ, ಹಿತ್ತಿಲು, ಅಟ್ಟ ಮೊದಲಾದ ಪದಗಳಿಗೆ ಅವರು ನೀಡಿದ ವ್ಯಾಖ್ಯಾನಗಳು ಚಾರಿತ್ರಿಕವಾದುದು.

ಕರ್ನಾಟಕದ ಹೊರಗಡೆ ಮತ್ತು ದೇಶದ ಹೊರಗಡೆಗೆ ಕನ್ನಡದ ಮಾನ ಹೆಚ್ಚಿಸಿದ ಬೆರಳೆಣಿಕೆಯ ಬರಹಗಾರರಲ್ಲಿ ಅನಂತಮೂರ್ತಿಯವರೂ ಒಬ್ಬರು. ಹವಾಯಿಯ ಹೊನುಲುಲುವಿನಲ್ಲಿ ನಡೆದ ಏಷಿಯಾ ವಿದ್ವಾಂಸರ ಸಮ್ಮೇಳನದಲ್ಲಿ ಅವರ ಉಲ್ಲೇಖವಾಗಿತ್ತು. ಇಸ್ರೇಲ್‌ನ ಹೀಬ್ರೂ ವಿಶ್ವವಿದ್ಯಾಲಯದಲ್ಲಿ ಅವರಿಗೆ ಅಭಿಮಾನಿಗಳಿರುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅವರ ಹೆಸರು ಹೇಳಿದರೆ, ನಮ್ಮ ಮರ್ಯಾದೆ ಹೆಚ್ಚುತ್ತಿತ್ತು. ಕನ್ನಡದ ಬರೆವಣಿಗೆಗೆ ಅಂತಾರಾಷ್ಟ್ರೀಯ ಮನ್ನಣೆ ದೊರಕಿಸಿದವರಲ್ಲಿ ಅನಂತಮೂರ್ತಿ ಪ್ರಮುಖರು.

ನಾನು ಬದುಕಿದ ಕಾಲಘಟ್ಟದಲ್ಲಿ ಅನಂತಮೂರ್ತಿಯವರಿದ್ದರು ಎಂಬುದು ನನ್ನಂತವನ ಆತ್ಮಸ್ಥೈರ್ಯವನ್ನು ಹೆಚ್ಚಿಸುತ್ತಿತ್ತು. ಬದುಕಿದ ಕಾಲಘಟ್ಟದ ಘನತೆ ಹೆಚ್ಚಿಸಿದ ಮಹಾನುಭಾವ ಅವರು.

ಅವರಿಗೆ ನನ್ನ ನಮನಗಳು. ಅ

***ಡಾ. ಪುರುಷೋತ್ತಮ ಬಿಳಿಮಲೆ***

# ಅನನ್ಯ ಸಾಹಿತಿ ಅನಂತಮೂರ್ತಿ



ಅನಂತದಲ್ಲಿ ಲೀನರಾದ ಅನಂತಮೂರ್ತಿ ಅನಂತಾನಂತದವರೆಗೂ ಅಂತರಂಗದಲ್ಲಿ ಅಚ್ಚಳಿಯದ ಮನೆ ಮಾಡಿ ಹೃನ್ಮಂದಿರಗಳಲ್ಲಿ ಜ್ಯೋತಿ ಬೆಳಗಿಸಿ ಮರೆಯಾದರು.

ಉಡುಪಿ ರಾಜಗೋಪಾಲಾಚಾರ್ಯ ಅನಂತಮೂರ್ತಿ ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಮೇಳಿ ಗ್ರಾಮದಲ್ಲಿ 1932 ಡಿಸೆಂಬರ್ 21ರಂದು ರಾಜಗೋಪಾಲಾಚಾರ್ಯ ಮತ್ತು ಸತ್ಯಭಾಮ ದಂಪತಿಗಳ ಮೊದಲ ಪುತ್ರನಾಗಿ ಜನಿಸಿದರು. ಬೇಗುವಳಿ, ದೂರ್ವಾಸಪುರದಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದರು. ಇವರ ಆಸಕ್ತಿಯ ಆಯಾಮಗಳು ಅವಿರತವಾಗಿ ಬರತೊಡಗಿದವು. ಆಂಗ್ಲ ಭಾಷೆಯನ್ನು ಕಲಿತರು. ಬ್ರಾಹ್ಮಣರಾಗಿದ್ದು ಬ್ರಾಹ್ಮಣ್ಯದಿಂದ ಹೊರಗೆ ಉಳಿದು ಸಜ್ಜನತೆ, ಪ್ರಾಮಾಣಿಕತೆಯೇ ಜೀವನ ಎಂದ ಅವರು ಮೌಢ್ಯ, ಕಂದಾಚಾರ, ಸಾಮಾಜಿಕ ಪಿಡುಗುಗಳನ್ನು ಕಟುವಾಗಿ ವಿರೋಧಿಸಿ ಎಲ್ಲರ ಟೀಕೆಗೆ ಒಳಗಾದವರು.

ವಿದ್ಯಾಭ್ಯಾಸದಲ್ಲಿ ವಿಪುಲವಾದ ಆಸಕ್ತಿ ಮೈಗೂಡಿಸಿಕೊಂಡಿದ್ದರಿಂದ ಪ್ರಾರಂಭದಲ್ಲಿಯೇ ಲಿಯೋ ಟಾಲ್‌ಸ್ಟಾಯಿರವರ ಬಗ್ಗೆ ಓದಿ ತಿಳಿದಿದ್ದರು. ಆಂಗ್ಲ ಭಾಷೆಯಲ್ಲಿ ಎಂ.ಎ. ಮುಗಿಸಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಉಪನ್ಯಾಸಕರಾದರು. ಅನಂತಮೂರ್ತಿಯವರ ಬರವಣಿಗೆಯ ವೈಖರಿಯೇ ವಿಭಿನ್ನವಾದದ್ದು. ಯಾವುದೇ ವಿಚಾರದಲ್ಲಿ ತಪ್ಪು ಎಂದು ಕಂಡು ಬಂದಲ್ಲಿ ನಿಷ್ಠುರವಾಗಿ ವಿರೋಧಿಸುತ್ತಿದ್ದು ಇತರ ಪರಿಣಾಮಕ್ಕೆ ಲೆಕ್ಕಿಸುತ್ತಿರಲಿಲ್ಲ.

ಕನ್ನಡದ ನವ್ಯ ಪರಂಪರೆಯ ಪ್ರಮುಖ ಲೇಖಕರಾದ ಇವರು ಕೇರಳದ ಕೊಟ್ಟಾಯಂ ಮಹಾತ್ಮ ಗಾಂಧಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ನಂತರ ನ್ಯಾಷನಲ್ ಬುಕ್ ಟ್ರಸ್ಟ್‌ನ ಅಧ್ಯಕ್ಷರಾಗಿ, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಅನಂತಮೂರ್ತಿಯವರ ಬರಹ 'ನಾನು ಹಿಂದು ಬ್ರಾಹ್ಮಣ', 'ಮೀಸಲಾತಿ' ಮುಂತಾದ ವಿಷಯಗಳ ಕುರಿತ ಇವರ ಅಭಿಪ್ರಾಯಗಳು, ಪ್ರಾಥಮಿಕ ಶಿಕ್ಷಣ ಕನ್ನಡ ಭಾಷೆಯ ಅಗತ್ಯ ಅನಿವಾರ್ಯತೆ ಕುರಿತ ಭಾಷಣಗಳು ಇಂದಿಗೂ ಚರ್ಚೆಗೊಳಗಾಗುತ್ತಿರುತ್ತವೆ. ಉತ್ತಮ ಕತೆಗಾರರು, ಕಾದಂಬರಿಕಾರರು, ಪ್ರಚಂಡ ಭಾಷಣಕಾರರೂ ಆಗಿರುವ ಅನಂತಮೂರ್ತಿ ವಿದ್ವತ್‌ಶೀಲರಾದಂತಹ ಸರಳ ಜೀವನ ಉನ್ನತ ಆಲೋಚನೆ ಎಂಬುದಕ್ಕೆ ಅನ್ವರ್ಥರಾದಂತಹವರು.

ನವ್ಯ ಪಂಥಕ್ಕೆ ಸೇರಿದ ಅನಂತಮೂರ್ತಿಯವರು ಕನ್ನಡದ ಸಾಹಿತ್ಯ ಪಾಶ್ಚಾತ್ಯ ಆಧುನಿಕ ತಾತ್ವಿಕ ಚಿಂತನೆಗಳಾದ ಅಸ್ತಿತ್ವವಾದ, ಅಸಂಗತವಾದಗಳನ್ನು ರೂಢಿಸಿಕೊಂಡು ಬೆಳೆದರು. ಅನಾಥಪ್ರಜ್ಞೆ, ಪರಕೀಯತೆ, ಸಿನಿಕತನ ಮುಂತಾದ ಬದುಕಿನ ಶೋಧಗಳಾಗಿ ರಚನೆಗೊಳ್ಳತೊಡಗಿದ್ದರು.

ಅನಂತಮೂರ್ತಿಯವರು ಪ್ರಶಸ್ತಿಗಳ ಮಹಾಪೂರವನ್ನೇ ಹೊತ್ತಿದ್ದರು. 1984ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 1998ರಲ್ಲಿ ಪದ್ಮಭೂಷಣ ಪ್ರಶಸ್ತಿ, 2008ರಲ್ಲಿ ನಾಡೋಜ ಪ್ರಶಸ್ತಿ, 1994ರಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದರು. ಕರ್ನಾಟಕಕ್ಕೆ 6ನೇ ಜ್ಞಾನಪೀಠ ಪ್ರಶಸ್ತಿ ದೊರಕಿಸಿಕೊಟ್ಟ ಜ್ಞಾನವಂತ ಅನಂತಮೂರ್ತಿ. 1966ರಲ್ಲಿ ಬರ್ಮಿಂಗ್ ಹ್ಯಾಮ್ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪಡೆದರು.

ವಿಶ್ವದ ನಾನಾ ಮೂಲೆಗಳಲ್ಲಿ ತಿರುಗಿ ತನ್ನ ಜ್ಞಾನ ಕ್ಷಿತಿಜವನ್ನು ವಿಸ್ತರಿಸಿಕೊಂಡರು. ಆದರೆ ನನ್ನ ನಾಡು ಯಾವಾಗ ಪ್ರಗತಿ ಸಾಧಿಸುತ್ತದೆ. ಅತುಳೈಶ್ವರ್ಯವಿದ್ದರೂ ಜನರ ಬಡತನ ನಿವಾರಣೆ ಸಾಧ್ಯವಾಗಿಲ್ಲ. ಸಾಮಾಜಿಕ ಕಳಕಳಿ ಅವರನ್ನು ಕಾಡುತ್ತಿತ್ತು. ಸಮಾಜವಾದಿ ಪಕ್ಷದ ಗೋಪಾಲ ಗೌಡರ ಸಂಪರ್ಕವಿತ್ತು. ಇವರಿಂದ ಹೆಚ್ಚು ಪ್ರಭಾವಿತರಾಗಿದ್ದೆನು ಎಂದು ಸ್ಮರಿಸಿಕೊಂಡಿದ್ದಾರೆ. ಎಲ್ಲಾ ಕವಿಗಳೊಡನೆ ಒಮ್ಮತ ಸಮ್ಮತವಿತ್ತು. ಅಡಿಗರು, ಮಾಸ್ತಿ, ಕುವೆಂಪುರವರೊಡನೆ ಭಿನ್ನಾಭಿಪ್ರಾಯವಿದ್ದು ಸಾಮರಸ್ಯದಿಂದ ಬೆಳೆದರು, ಬಾಳಿದರು. ಕುವೆಂಪು ಕಾರಂತರಿಂದಲೂ ಪ್ರಭಾವಿತರಾಗಿದ್ದರು.

ಅನಂತಮೂರ್ತಿಯವರು ತಮ್ಮ ವೈಯಕ್ತಿಕ ಜೀವನದಲ್ಲು ವಿಭಿನ್ನ ವಿಶಿಷ್ಟ ರೀತಿಯಲ್ಲೆ ಇದ್ದರು. ತನ್ನ ಬಾಳ ಸಂಗಾತಿ 'ಎಸ್ತರ್' ಪ್ರೇಮ ವಿವಾಹವಾಗಿತ್ತು. ಪ್ರೀತಿ ಪ್ರೇಮದಿಂದಲೇ ಕಡೆಯವರೆಗೂ ಜೀವನ ಸಾಗಿಸಿದ್ದರು. ಅನಂತ ಮೂರ್ತಿಯವರ ಕಳೇಬರದ ಮುಂದೆ ದುಃಖಿಸುತ್ತಿರುವ ಎಸ್ತರರ ದೃಶ್ಯ ದೂರದರ್ಶನದಲ್ಲಿ ನೋಡಿದಾಗ ಮನಸ್ಸಿಗೆ ಘಾಸಿ ಉಂಟಾಯಿತು. ಇವರ ಪುತ್ರ ಶರತ್, ಪುತ್ರಿ ಅನುರಾಧ ಹಾಗೂ ಅಳಿಯ ವಿವೇಕ್ ಶಾನ್‌ಭಾಗ್ ಇದು ಇವರ ಸುಖೀ ಕುಟುಂಬ. ತಮ್ಮ ಬದುಕಿನ ಎಲ್ಲಾ ವಿವರಗಳನ್ನು ನೋವು ನಲಿವು ಭಾವನೆಗಳ ಸಂವೇದನೆಗಳನ್ನು ತಮ್ಮ ಆತ್ಮಕಥನ ಸುರಗಿಯಲ್ಲಿ ಬಿತ್ತರಿಸಿದ್ದಾರೆ.

ಅದ್ಭುತ ಬರಹಗಾರರು, ಸೃಜನಶೀಲ ಸಾಹಿತಿಗಳು, ಸಾಮಾಜಿಕ ಚಟುವಟಿಕೆಗಳಲ್ಲಿ ಆಸಕ್ತಿವುಳ್ಳವರಾಗಿದ್ದರು. ಇವರ ಬರಹಗಳು ಅಂತರರಾಷ್ಟ್ರೀಯ ಖ್ಯಾತಿ ಪಡೆದಿವೆ. ಶಿಷ್ಯ ವೃಂದದವರು ಇವರ ಆದರ್ಶಗಳನ್ನು ಇಂದಿಗೂ ನೆನೆಯುತ್ತಾರೆ.

ಅನಂತಮೂರ್ತಿಯವರು 81 ವರ್ಷ ತುಂಬು ಜೀವನ ನಡೆಸಿ ಆಗಸ್ಟ್ 22ರಂದು ವಿಧಿವಶರಾದರು. ಸಾರಸ್ವತಲೋಕದ ದಿಗ್ಗಜರಾಗಿದ್ದು ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಲೋಕಕ್ಕೆ ಅನುಪಮ ಕಾಣಿಕೆ ಸಲ್ಲಿಸಿದ ಧೀಮಂತ ವ್ಯಕ್ತಿ ಯು.ಆರ್. ಅನಂತಮೂರ್ತಿ ಇಂದು ಕನ್ನಡ ನಾಡಿನ ಜನತೆ ದುಃಖದ ಕರಾಳ ಛಾಯೆಯಲ್ಲಿರುವ ಭಾಸ ಉಂಟು ಮಾಡಿದೆ. ನಡೆನುಡಿಯಲ್ಲಿ ಸಾಂಗತ್ಯವಿತ್ತು. ಮಾತೃಭಾಷೆ ಬದುಕಿನ ಮುಖ್ಯವಾಹಿನಿ ಎಂದೇ ನಂಬಿದ್ದವರು. ಇವರ ಆದರ್ಶಗಳನ್ನು ಅರಿತು ಇಂದಿನ ಯುವ ಪೀಳಿಗೆ ನಾಡು-ನುಡಿಗೆ ಶ್ರಮಿಸಿದರೆ ಅದೇ ಅವರಿಗೆ ನಾವೆಲ್ಲ ಅರ್ಪಿಸುವ ಶ್ರದ್ಧಾಂಜಲಿ. ಅ

*ಎಂ.ಎಸ್. ಲಾವಣ್ಯ ಬಸವರಾಜ್*

## ಶ್ರೀಶೈಲ ಸಸಾಲಟ್ಟಿ ಅವರಿಗೆ ಶ್ರದ್ಧಾಂಜಲಿ



ದೆಹಲಿಯ ಜವಾಹರಲಾಲ್ ನೆಹರೂ ವಿಶ್ವ ವಿದ್ಯಾಲಯದ ಸೆಂಟರ್ ಆಫ್ ಜರ್ಮನ್ ಸ್ಟಡೀಸ್‌ನಲ್ಲಿ ಪ್ರೊಫೆಸರ್ ಆಗಿದ್ದ ಶ್ರೀಶೈಲ ಸಸಾಲಟ್ಟಿ ಅವರು ಇತ್ತೀಚೆಗೆ ನಿಧನ ಹೊಂದಿದರು. ದೆಹಲಿ ಕರ್ನಾಟಕ ಸಂಘದ ಸದಸ್ಯರಾಗಿದ್ದ ಅವರಿಗೆ ಸಂಘದಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಈ ಸಂದರ್ಭದಲ್ಲಿ ಪ್ರೊ. ಎಚ್.ಎಸ್. ಶಿವಪ್ರಕಾಶ್, ಡಾ. ಪುರುಷೊತ್ತಮ ಬಿಳಿಮಲೆ, ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಶ್ರೀ ವಿ.ವಿ. ಬಿರಾದಾರ ಮೊದಲಾದವರು ಅಗಲಿದ ಆತ್ಮಕ್ಕೆ ಶಾಂತಿ ಕೋರಿದರು. ಅ

## ಕಮಲಮ್ಮ ಶಾರದಾ ಪ್ರಸಾದ್ ನಿಧನ



ಪ್ರಧಾನ ಮಂತ್ರಿಗಳ ವಾರ್ತಾ ಸಲಹೆಗಾರರು ಹಾಗೂ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿದ್ದ ದಿವಂಗತ ಶ್ರೀ ಶಾರದಾ ಪ್ರಸಾದ್ ಅವರ ಧರ್ಮ ಪತ್ನಿ ಶ್ರೀಮತಿ ಕಮಲಮ್ಮ ಅವರು ದೈವಾಧೀನರಾದರು. ಅವರ ಅಂತ್ಯಕ್ರಿಯೆ ಆಗಸ್ಟ್ 11ರಂದು ಲೋಧಿಗಾರ್ಡನ್ ಶವಾಗಾರದಲ್ಲಿ ನಡೆಯಿತು. ಅ

# ದೆಹಲಿ ಒಕ್ಕಲಿಗ ಗೌಡ ಸಂಘದಲ್ಲಿ ಆದಿಚುಂಚನಗಿರಿ ಸ್ವಾಮೀಜಿಯವರಿಂದ ಆಶೀರ್ವಚನ









ದೆಹಲಿಯು ಮಹಾಭಾರತದ ಕಾಲದಿಂದಲೂ ಭರತಖಂಡದ ರಾಜ್ಯಸ್ಥಾನವಾಗಿದ್ದು ಆನಂತರವು ಕೂಡಾ ರಾಷ್ಟ್ರದ ಕೇಂದ್ರ ಬಿಂದುವಾಗಿದ್ದು ದೇಶದ ಪ್ರಗತಿ ಹಾಗೂ ಸ್ಥಾಪನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ ಎಂದು ಆದಿಚುಂಚನಗಿರಿ ಸಂಸ್ಥಾನದ ಗುರುಗಳಾದ ಶ್ರೀಶ್ರೀಶ್ರೀ ನಿರ್ಮಲಾನಂದ ಸ್ವಾಮೀಜಿಯವರು ಹೇಳಿದರು. ಅವರು ದೆಹಲಿ ಒಕ್ಕಲಿಗ ಗೌಡ ಸಂಘವು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಇದೇ ಆಗಸ್ಟ್ 6ರಂದು ಏರ್ಪಡಿಸಿದ ಆಶೀರ್ವಚನ ಕಾರ್ಯಕ್ರಮದಲ್ಲಿ ಮಾತಾಡುತ್ತಿದ್ದರು.

ಅಬ್ರಹಾಂ ಲಿಂಕನ್‌ರವರು ಒಂದು ಸಮಾರಂಭದಲ್ಲಿ ಹೇಗೆ ಅವರ ವೃತ್ತಿಯನ್ನು ನೆನೆಯುತ್ತಾ ಅಧಿಕಾರ ಬಂದಾಗ ಎಲ್ಲರೂ ಅವರ ಕುಲ ಕಸುಬನ್ನು ಮರೆಯಬಾರದು ಎಂದರು. ಒಕ್ಕಲಿಗ ಸಮಾಜದ ಎಲ್ಲಾ ಸಂಸದರು ರಾಜ್ಯದಲ್ಲಿ ತಮ್ಮ ಸಮುದಾಯದ ಒಳಿತಿಗೆ ಒಟ್ಟಾಗಿ ದುಡಿಯಲಿ ಎಂದು ಹಾರೈಸಿದರು. ಕೃಷಿಕ್ ಸರ್ವೋದಯ ಫೌಂಡೇಶನ್‌ನ ಬೇಡಿಕೆಗಳಾದ ದೆಹಲಿಯ ಯು.ಪಿ.ಎಸ್.ಸಿ. ನಡೆಸುವ ತರಬೇತಿಯನ್ನು ಮಾಡಲು ವೈಖರಿ, ತರಬೇತಿ ಕೇಂದ್ರದ ಅಭಿವೃದ್ಧಿ ವಿದ್ಯಾರ್ಥಿಗಳಿಗೆ ಉಳಿದುಕೊಳ್ಳಲು ಸ್ಥಳಗಳನ್ನು ಕೊಡಲು ಸ್ವಾಮೀಜಿಯವರು ಒಪ್ಪಿಕೊಂಡರು.

ಸಮಾರಂಭದಲ್ಲಿ ಮಾಜಿ ಪ್ರಧಾನಮಂತ್ರಿ ಶ್ರೀ ಎಚ್.ಡಿ. ದೇವೇಗೌಡ, ಕೇಂದ್ರ ರೈಲ್ವೇ ಖಾತೆ ಸಚಿವರಾದ ಶ್ರೀ ಡಿ.ವಿ. ಸದಾನಂದ ಗೌಡ, ರಾಜ್ಯಸಭಾ ಸದಸ್ಯರಾದ ಪ್ರೊ. ರಾಜೀವ್ ಗೌಡ, ಲೋಕಸಭಾ ಸದಸ್ಯರುಗಳಾದ ಕು. ಶೋಭಾ ಕರಂದ್ಲಾಜೆ, ಶ್ರೀ ಪುಟ್ಟರಾಜು, ಶ್ರೀ ಪ್ರತಾಪ್ ಸಿಂಹ ಅವರೂ ಉಪಸ್ಥಿತರಿದ್ದರು. ಕನ್ನಡ ಸಿನಿಮಾರಂಗದ ದಿಗ್ಗಜ ನಾಗಾಭರಣ ಅವರೂ ಉಪಸ್ಥಿತರಿದ್ದರು. ಪೂಜ್ಯ ಸ್ವಾಮೀಜಿಯರವನ್ನು, ಸಮಾರಂಭದಲ್ಲಿ ಭಾಗವಹಿಸಿದ ಮಾಜಿ ಪ್ರಧಾನಿ, ಕೇಂದ್ರ ರೈಲ್ವೇ ಮಂತ್ರಿ ಹಾಗೂ ಎಲ್ಲಾ ಸಂಸತ್ ಸದಸ್ಯರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾದ ಡಾ. ಅಪ್ಪಾಜಿ ಗೌಡರನ್ನು ಸನ್ಮಾನಿಸಲಾಯಿತು.

ಶ್ರೀ ಎಚ್.ಡಿ. ದೇವೇಗೌಡರು ಮಾತಾಡುತ್ತಾ ದೆಹಲಿ ಒಕ್ಕಲಿಗ ಗೌಡ ಸಂಘವು ನಡೆದು ಬಂದ ಹಾದಿಯನ್ನು ಸ್ವಾಗತಿಸಿದರು. ಸಂಘಕ್ಕೆ ನಿವೇಶನವನ್ನು ಕೊಡಿಸುವ ಬಗ್ಗೆ ಸಹಾಯ ಮಾಡುವುದಾಗಿ ತಿಳಿಸಿದ ಅವರು ರಾಜ್ಯದ ಇತರ ಸಮಸ್ಯೆಗಳ ನಿವಾರಣೆಗೆ ಸಂಸದರ ಜೊತೆಗೂಡಿ ಸ್ಪಂದಿಸುವುದಾಗಿ ಭರವಸೆಯನ್ನು ನೀಡಿದರು.

ರೈಲ್ವೇ ಸಚಿವ ಶ್ರೀ ಡಿ.ವಿ. ಸದಾನಂದ ಗೌಡರು ಮಾತನಾಡುತ್ತ ತನಗೆ ರೈಲ್ವೇ ಸಚಿವರಾಗುವಂತಹ ಅವಕಾಶವನ್ನು ದೇಶದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಕೊಟ್ಟರು. ಈ ಅವಕಾಶವನ್ನು ಉಪಯೋಗಿಸಿಕೊಂಡು  ಸಮಾಜಕ್ಕೆ, ಪಕ್ಷಕ್ಕೆ ಹಾಗೂ ಸಾರ್ವಜನಿಕರು ಮೆಚ್ಚುವ ಹಾಗೆ ಕೆಲಸಗಳನ್ನು ನಿರ್ವಹಿಸುವುದಾಗಿ ತಿಳಿಸಿದರು. ಉತ್ತಮ ರೀತಿಯ ರೈಲ್ವೇ ಸೌಕರ್ಯಗಳನ್ನು ಕರ್ನಾಟಕದಲ್ಲಿ ಕೊಡುವ ದಿಸೆಯಲ್ಲಿ ಈಗಾಗಲೇ ಹೆಜ್ಜೆಯನ್ನಿಟ್ಟಿದ್ದು ಮುಂದೆಯೂ ಕೂಡಾ ಕೊಡುವುದಾಗಿ ಆಶ್ವಾಸನೆಯನ್ನು ನೀಡಿದರು.

ರಾಜ್ಯ ಸಭಾ ಸದಸ್ಯರಾದ ಪ್ರೊ. ರಾಜೀವ್ ಗೌಡರು ಮಾತನಾಡುತ್ತ ಕನ್ನಡಕ್ಕೆ ಶಾಸ್ತ್ರೀಯ







ಮಾನ್ಯತೆಯಂತೆ ಎಲ್ಲಾ ಸೌಲಭ್ಯಗಳನ್ನು ಕೊಡಿಸಲು, ರಾಜ್ಯದ ಪ್ರಮುಖ ನಗರ ಬೆಂಗಳೂರಿನಲ್ಲೂ ಉತ್ತಮವಾದ ವ್ಯವಸ್ಥೆಯನ್ನು ಸ್ಥಾಪಿಸಲು, ಮತ್ತು ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಹಾಗೂ ನೀರಾವರಿಗೆ ಬೇಕಾದ ಯೋಜನೆಗಳನ್ನು ತರಲು ಬೇಕಾದ ಎಲ್ಲಾ ಪ್ರಯತ್ನಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಲ್ಲಿ ಇತರ ಸಂಸದರ ಒಡಗೂಡಿ ಸಾಕಾರಗೊಳಿಸುವ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಮೈಸೂರು ಸಂಸತ್ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ಅವರು ಮಾತನಾಡುತ್ತಾ ದೇಶದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ದೇಶದ ಪ್ರಗತಿಯ ಕನಸನ್ನು ನನಸು ಮಾಡುವ ಯೋಜನೆಗಳಲ್ಲಿ ತನಗೆ ಅವಕಾಶ ಸಿಕ್ಕಿರುವ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದರು. ಕರ್ನಾಟಕದ ಬಹಳಷ್ಟು ಜಿಲ್ಲೆಯ ಜನರು ತನಗೆ ಹತ್ತಿರವಿದ್ದು ಅವರ ಒಬ್ಬನಾಗಿದ್ದೆ, ಸದಾ ಕಾಲ ಜನರಿಗೆ ಸ್ಪಂದಿಸುತ್ತೇನೆ ಎಂದು ಅವರು ತಿಳಿಸಿದರು.

ಉಡುಪಿ ಚಿಕ್ಕಮಗಳೂರು ಕ್ಷೇತ್ರದ ಸಂಸದೆ ಕುಮಾರಿ ಶೋಭಾ ಕರಂದ್ಲಾಜೆಯವರು ಕರ್ನಾಟಕದ ಅಡಿಕೆ, ಕಾಫಿ, ತೆಂಗು ಹಾಗು ಇತರ ಬೆಳೆಗಾರರ ಸಮಸ್ಯೆಗಳ ಪರಿಹಾರದ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಲ್ಲಿ ವ್ಯವಹರಿಸುವುದಾಗಿ ತಿಳಿಸಿದರು. ಕಾಫಿ ಬೆಳೆಗಾರರ ನಿಯೋಗವನ್ನು ರೈಲ್ವೇ ಸಚಿವ ಸದಾನಂದ ಗೌಡರು, ಸಂಸತ್ ಸದಸ್ಯ ಪ್ರತಾಪ್‌ಸಿಂಹ ಅವರನ್ನು ಒಡಗೂಡಿ ಕೇಂದ್ರ ಹಣಕಾಸು ಮತ್ತು ವಾಣಿಜ್ಯ ಸಚಿವರನ್ನು ಭೇಟಿ ಮಾಡಿ ಕಾಫಿ ಬೆಳೆಗಾರರ ವಿವಿಧ ಸಮಸ್ಯೆಗಳ ಬಗ್ಗೆ ಮನವಿ ಸಲ್ಲಿಸುವುದಾಗಿ ಹೇಳಿದರು.

ಶ್ರೀ ಪುಟ್ಟರಾಜುರವರು ಮಾತನಾಡುತ್ತಾ, ತಾನೂ ಕೂಡಾ ರೈತರ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನ ಮಾಡುವುದಾಗಿ ತಿಳಿಸುತ್ತ ಇತರ ಸಂಸದರು ಮಂಡಿಸಿರುವ ವಿಚಾರಗಳ ಬಗ್ಗೆ ಸಹಮತ ವ್ಯಕ್ತಪಡಿಸಿದರು.

ಡಾ. ಪುರುಷೋತ್ತಮ ಬಿಳಿಮಲೆ ಅವರು ಕಾರ್ಯಕ್ರಮವನ್ನು ನಿರೂಪಿಸುತ್ತಾ ದೆಹಲಿ ಕರ್ನಾಟಕ ಸಂಘದ ಬಳಿ ಇರುವ ಮೆಟ್ರೋ ಸ್ಟೇಷನ್‌ಗೆ ದೆಹಲಿ ಕರ್ನಾಟಕ ಸಂಘ ಸ್ಟೇಷನ್ ಅಂತ ಹೆಸರಿಡಬೇಕೆಂದು ಒತ್ತಾಯಿಸಿದರು.

ದೆಹಲಿ ಒಕ್ಕಲಿಗ ಗೌಡ ಸಂಘದ ಅಧ್ಯಕ್ಷರಾದ ಶ್ರೀ ಎನ್.ಎ. ಮಾಧವ ಅವರು ದೆಹಲಿ ಒಕ್ಕಲಿಗ ಗೌಡ ಸಂಘದ ಹುಟ್ಟು, ಅದರ ಬೆಳವಣಿಗೆ ಹಾಗೂ ಅದರ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು. ಸಂಘದ ಕಟ್ಟಡವನ್ನು ಕಟ್ಟಲು ಒಂದು ನಿವೇಶನ ಕೊಡಿಸಿಕೊಡಬೇಕಾಗಿ ಮನವಿ ಸಲ್ಲಿಸಿದರು.

ಕೇಂದ್ರದ ಕೃಷಿ ಬೆಲೆ ಹಾಗೂ ಮೌಲ್ಯ ಆಯೋಗದ ಸದಸ್ಯರಾದ ಶ್ರೀ ಡಿ.ಎಸ್. ರಘು ಅವರು ರಾಜ್ಯದ ತೆಂಗು, ಅಡಿಕೆ, ಕಾಫಿ, ಕಬ್ಬು ಹಾಗು ಇತರ ಬೆಳೆಗಳನ್ನು ಬೆಳೆಯುವ ರೈತರ ಸಮಸ್ಯೆಗಳನ್ನು ಸಭೆಗೆ ವಿವರಿಸಿದರು. ಅದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಪಡೆಯಬಹುದಾದ ನೆರವುಗಳನ್ನು ತೆಗೆದುಕೊಳ್ಳಲು ಕರ್ನಾಟಕ ರಾಜ್ಯದ ಸಚಿವರು ಮತ್ತು ಸಂಸತ್ ಸದಸ್ಯರು ಪ್ರಯತ್ನ ಮಾಡಬೇಕಾಗಿ ಕೇಳಿಕೊಂಡರು. ಈ ಸಂದರ್ಭದಲ್ಲಿ ಈ ಬೆಳೆಗಳ ಹಾಗೂ ಸಮಸ್ಯೆಗಳ ಬಗ್ಗೆಯ ವಿವರಗಳಿರುವ ಮಾಹಿತಿಯನ್ನು ಸಂಘದ ಬೇಡಿಕೆಯನ್ನು ಸಲ್ಲಿಸಲಾಯಿತು.

ಶ್ರೀ ಪಿ.ಸಿ. ಶ್ರೀನಿವಾಸ್ ಅವರು ಕೃಷಿಕ್ ಸರ್ವೋದಯ ಫೌಂಡೇಶನ್ ಭಾರತೀಯ ಆಡಳಿತ ಸೇವೆ ಹಾಗೂ ಇತರ ಸೇವೆಗಳಿಗೆ ಕೇಂದ್ರ ಸಾರ್ವಜನಿಕ ನೇಮಕ ಆಯೋಗ ನಡೆಸುವ ಪೂರ್ವಭಾವಿ ಮುಖ್ಯ ಪರೀಕ್ಷೆಗಳು ಹಾಗೂ ಸಂದರ್ಶನಕ್ಕೆ ಕರ್ನಾಟಕದಿಂದ ಬರುವ ಅಭ್ಯರ್ಥಿಗಳಿಗೆ ಹಲವಾರು ವರ್ಷಗಳಿಂದ ತರಬೇತಿ ನೀಡುತ್ತಿರುವ ಬಗ್ಗೆ ವಿವರಿಸಿದರು. ಸ್ವಾಮೀಜಿಯರಿಗೆ ಮತ್ತು ಸಂಸದರಿಗೆ ಮನವಿ ಸಲ್ಲಿಸಿ ಕರ್ನಾಟಕದಿಂದ ಬರುವ ವಿದ್ಯಾರ್ಥಿಗಳಿಗೆ ಉಳಿದುಕೊಳ್ಳಲು ಜಾಗ, ಸುಸಜ್ಜಿತ ತರಬೇತಿ ಕೇಂದ್ರದ ಸ್ಥಾಪನೆಯ ಕೋರಿಕೆಯನ್ನು ಸಲ್ಲಿಸಿದರು.

ಶ್ರೀ ಶ್ರೀನಿವಾಸ್ ಮತ್ತು ಸಂಗಡಿಗರ ಪ್ರಾರ್ಥನೆಯ ಮೂಲಕ ಸಭೆಯು ಆರಂಭಗೊಂಡಿತು. ದೆಹಲಿ ಒಕ್ಕಲಿಗ ಗೌಡ ಸಂಘದ ಕಾರ್ಯದರ್ಶಿ ಡಾ. ವಿ.ಆರ್. ಗುಡ್ಡೇಗೌಡ ಸ್ವಾಮೀಜಿಯವರಿಗೆ, ಸಂಸದರಿಗೆ, ಸಮಾಜದ ಮತ್ತು ಕರ್ನಾಟಕದ ಬಗ್ಗೆ ಇರುವ ಕಳಕಳಿಯ ಬಗ್ಗೆ ಪ್ರಶಂಸೆ ವ್ಯಕ್ತಪಡಿಸುತ್ತಾ ಎಲ್ಲರಿಗೂ ವಂದಿಸಿದರು. ಸಂಘದ ಪದಾಧಿಕಾರಿಗಳು, ಸದಸ್ಯರು ಹಾಗೂ ಕುಟುಂಬವರ್ಗದವರು, ದೆಹಲಿಯ ಇತರ ಸಂಘಗಳ ಪದಾಧಿಕಾರಿಗಳು, ಸದಸ್ಯರು ಹಾಗೂ ಕರ್ನಾಟಕದಿಂದ ಮತ್ತು ಇತರ ಕಡೆಗಳಿಂದ ಬಂದ ಅತಿಥಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಅ

***ಡಿ.ಎಸ್. ರಘು***



## ಸಂಗೊಳ್ಳಿರಾಯಣ್ಣ ಜನ್ಮ ದಿನಾಚರಣೆ

ಸಂಗೊಳ್ಳಿ ರಾಯಣ್ಣ ಅಭಿಮಾನಿ ಗೆಳೆಯರ ಬಳಗವು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಜನ್ಮ ದಿನವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಆಗಸ್ಟ್ 15 ರಂದು ಆಚರಿಸಿತು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡುತ್ತಾ, ಮುಂದಿನ ಪೀಳಿಗೆಗೆ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ತಮ್ಮ ಪ್ರಾಣ ತೆತ್ತ ಹುತಾತ್ಮರ ಪರಿಚಯದಿಂದ ಅವರ ಆದರ್ಶ ಮಾದರಿಯಾಗಬೇಕು ಎಂದರು. ರಂಗಕರ್ಮಿ ಶ್ರೀ ಶಿವಾನಂದ ಇಂಗಳೇಶ್ವರ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಪ್ರಥಮ ಮಹಿಳೆ ಕನ್ನಡತಿ ಕಿತ್ತೂರ ರಾಣಿ ಚೆನ್ನಮ್ಮ, ಆದರೆ ಕನ್ನಡಿಗರ ಸಂಕೋಚ ಸ್ವಭಾವದಿಂದಾಗಿ ಈ ಘಟನೆ ಇತಿಹಾಸದಲ್ಲಿ ದಾಖಲಾಗದೆ ಇದ್ದದ್ದು ವಿಷಾದನೀಯ ಎಂದರು. ಮುಂಬರುವ ದಿನಗಳು ಕನ್ನಡಿಗರ ಬಲಿದಾನದ ಪರಿಚಯ ಇಡೀ ಭಾರತೀಯ ಸಮುದಾಯಕ್ಕೆ ಮಾಡಿಕೊಡುವ ಕೈಂಕರ್ಯ ಕೈಗೊಳ್ಳಲಿ ಎಂದರು. ಸಂಗೊಳ್ಳಿರಾಯಣ್ಣನು ನಾಡಿಗಾಗಿ ಮಾಡಿದ ಬಲಿದಾನದ ಬಗ್ಗೆ ಮಾತಾಡುತ್ತಾ ಆತನ ಆದರ್ಶ ಮುಂದಿನ ಪೀಳಿಗೆಗೆ ತಿಳಿಸಿಕೊಡುವ ಕಾರ್ಯ ಆಗಬೇಕು, ಅದಕ್ಕೆ ಕನ್ನಡಿಗರೆಲ್ಲ ಒಂದಾಗಿ ಮಾಡಬೇಕಾದ ಕೆಲಸ ಬಹಳಷ್ಟಿದೆ. ಕನ್ನಡಿಗರು ಇದನ್ನು ಮಾಡುತ್ತಾರೆ ಮಾಡುವಂತಾಗಲಿ ಎಂದರು. ಶ್ರೀ ಮಹಾದೇವ ಅವರು ಸ್ವಾಗತಿಸಿದರು. ಅ

ಆಶಾಲತ ಎಂ

## ಡೆರಿಲ್ ಜೆಸಿಕಾ ಫೆರ್ನಾಂಡಿಸ್ ಸಾಧನೆ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿರುವ ಕುಮಾರಿ ಡೆರಿಲ್ ಜೆಸಿಕಾ ಫೆರ್ನಾಂಡಿಸ್ ಅವರು ಮಾರ್ಚ್ 24 ರಿಂದ ಜೂನ್ 21 ರವರೆಗೆ ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ನಡೆದ ರಾಷ್ಟ್ರಮಟ್ಟದ 'ಎನ್‌ಸಿಸಿ ಅಧಿಕಾರಿ ತರಬೇತಿ ಅಕಾಡೆಮಿ'ಯಲ್ಲಿ ಮೂರು ತಿಂಗಳ ತರಬೇತಿಯನ್ನು ಪಡೆದಿದ್ದು ಈ ತರಬೇತಿಯ ಅವಧಿಯಲ್ಲಿ 'ಎನ್‌ಸಿಸಿ–ಡ್ರಿಲ್'ನಲ್ಲಿ ಬೆಳ್ಳಿ ಪದಕವನ್ನು ಹಾಗೂ 'ಎನ್‌ಸಿಸಿ–ಪರೇಡ್'ನ ನಾಯಕತ್ವ ವಹಿಸಿ ಚಿನ್ನದ ಪದಕವನ್ನು ಪಡೆದಿದ್ದಾರೆ. ಅ



## ಸಿಂಚನ ಮೂರ್ತಿ ಭರತನಾಟ್ಯ ರಂಗಪ್ರವೇಶ



ಕನ್ನಡದ ಉದಯೋನ್ಮುಖ ಕಲಾವಿದೆ 16ರ ಹರೆಯದ ಕುಮಾರಿ ಸಿಂಚನ ಮೂರ್ತಿ ಅವರ ಭರತನಾಟ್ಯ ರಂಗಪ್ರವೇಶ ಇತ್ತೀಚೆಗೆ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಡೆಯಿತು. ಸಿಂಚನ ಮೂರ್ತಿ ಕೇಂದ್ರಿಯ ವಿದ್ಯಾಲಯದ ಹನ್ನೊಂದನೇ ತರಗತಿಯಲ್ಲಿರುವ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿ. ಇವರು ತನ್ನ ಒಂಬತ್ತನೆಯ ವಯಸ್ಸಿನಲ್ಲೇ ಭರತನಾಟ್ಯ ಕಲಿಯಲು ಪ್ರಾರಂಭಿಸಿದರು. ನೃತ್ಯದ ಮೇಲೆ ಅಪಾರ ಪ್ರೀತಿ. ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರುಗಳಾದ ಮತ್ತು ಕರ್ನಾಟಕ ಭವನದಲ್ಲಿ ಕೆಲಸ ಮಾಡುತ್ತಿರುವ ಶ್ರೀ ಸುರೇಂದ್ರ ಮೂರ್ತಿ ಮತ್ತು ಶ್ರೀಮತಿ ಸುಜಾತಾ ಮೂರ್ತಿ ದಂಪತಿಗಳ ಪುತ್ರಿ. ತಾಯಿ ಸುಜಾತ ಮೂರ್ತಿ ಅವರ ಪ್ರೇರಣೆಯಿಂದ ಹಾಗೂ ಗುರುಗಳಾಗಿರುವ ಡಾ. ಸರೋಜ ವೈದ್ಯನಾಥನ್ ಅವರಿಂದ ಭರತನಾಟ್ಯ ತರಬೇತಿಯನ್ನು ಪಡೆದಿದ್ದಾರೆ. ಅ

## ಮೊಹೇರ್ ಶೆಟ್ಟಿ ಕಾಲೇಜು ಸಂಘದ ಜಿಲ್ಲಾಧ್ಯಕ್ಷೆ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯೆ ಕು. ಮೊಹೇರ್ ಶೆಟ್ಟಿ ಅವರು ಮಂಗಳೂರು ವಿಶ್ವವಿದ್ಯಾನಿಲಯದ ಉಡುಪಿ ಜಿಲ್ಲೆಯ ಬೆಳ್ಳಿ ಹಬ್ಬ ಆಚರಿಸುತ್ತಿರುವ ಸರ್ವ ಕಾಲೇಜು ವಿದ್ಯಾರ್ಥಿ ಸಂಘದ 2014–15ನೇ ಸಾಲಿನ ನೂತನ ಮೊದಲ ಮಹಿಳಾ ಅಧ್ಯಕ್ಷೆಯಾಗಿ ಚುನಾಯಿತರಾಗಿದ್ದಾರೆ. ದೆಹಲಿ ಕರ್ನಾಟಕ ಸಂಘದ ಮಾಜಿ ಜಂಟಿ ಕಾರ್ಯದರ್ಶಿ ಶ್ರೀ ಕೆ.ಎಸ್.ಜಿ. ಶೆಟ್ಟಿಯವರ ಮಗಳಾದ ಮೊಹೇರ್ ಶೆಟ್ಟಿ ಉಡುಪಿಯ ಅಜ್ಜರಕಾಡಿನಲ್ಲಿರುವ ಡಾ. ಜಿ. ಶಂಕರ್ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಿಮ ವರ್ಷದ ಪತ್ರಿಕೋದ್ಯಮ ಪದವಿ ವ್ಯಾಸಂಗ ಮಾಡುತ್ತಿದ್ದಾರೆ. ಅ

## ಮೋಹನ್ ಕುಮಾರ್‌ಗೆ ಬೀಳ್ಕೊಡುಗೆ

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಮತ್ತು ಎಲ್ಲ ಕಾರ್ಯಕ್ರಮಗಳಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಶ್ರೀ ಪಿ.ಎಸ್. ಮೋಹನ್ ಕುಮಾರ್ ದಂಪತಿಯನ್ನು ಇದೇ ಆಗಸ್ಟ್ 10ರಂದು ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಪುಷ್ಪಗುಚ್ಛ ನೀಡಿ ಬೀಳ್ಕೊಟ್ಟರು.

ಶ್ರೀ ಪಿ.ಎಸ್. ಮೋಹನ್ ಕುಮಾರ್ ಅವರು ದೆಹಲಿಯಲ್ಲಿ ಹಲವು ವರ್ಷಗಳಿಂದ ಸೆಂಟ್ರಲ್ ವಾಟರ್ ಕಮಿಷನ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದು ಇದೀಗ ವರ್ಗಾವಣೆಗೊಂಡು ಬೆಂಗಳೂರಿಗೆ ತೆರಳಲಿದ್ದಾರೆ. ಅ



## ಸಂಘಕ್ಕೆ ಗಣ್ಯರ ಭೇಟಿ





ಮೈಸೂರಿನ ಮಾಜಿ ಸಂಸದ ಶ್ರೀ ಎಚ್ ವಿಶ್ವನಾಥ ಮತ್ತು ಶ್ರೀ ಎಚ್.ಎಂ. ರೇವಣ್ಣ ಅವರು ಇತ್ತೀಚೆಗೆ ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿ ದೆಹಲಿ ಕರ್ನಾಟಕ ಸಂಘದ ಕಟ್ಟಡಕ್ಕೆ ಹೆಚ್ಚುವರಿ ಕೆಲಸಕ್ಕಾಗಿ ಕರ್ನಾಟಕ ಸರ್ಕಾರದಿಂದ ಅನುದಾನ ಕೊಡಿಸಲು ಭರವಸೆ ನೀಡಿದ ಸಂದರ್ಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಸ್ವಾಗತಿಸುತ್ತಿರುವುದು. ಅ





# ದೆಹಲಿ ಕನ್ನಡ ಸಂಘ ಸಂಸ್ಥೆಗಳಲ್ಲಿ ಗಣೇಶೋತ್ಸವ

1. ದೆಹಲಿ ಕರ್ನಾಟಕ ಸಂಘ 2. ಜನಕಪುರಿ ಕನ್ನಡ ಕೂಟ 3. ಗಣೇಶೋತ್ಸವ ಗೆಳೆಯರ ಬಳಗ, ಆರ್.ಕೆ.ಪುರಂ 4. ಗೌಡ ಸಾರಸ್ವತ ಸಮಾಜ, ರಾಜೇಂದ್ರ ನಗರ 5. ಗುರ್‌ಗಾಂವ್ ಕನ್ನಡ ಸಂಘ 6. ದೆಹಲಿ ಕನ್ನಡಿಗರ ಪೋಲಿಸ್ ಕಲ್ಯಾಣ ಸಮಿತಿ, ಅಶೋಕ್ ವಿಹಾರ್ 7. ಕರ್ನಾಟಕ ಭವನ ಎಂಪ್ಲಾಯಿಸ್ ವೆಲ್‌ಫೇರ್ ಅಸೋಸಿಯೇಶನ್, ಆರ್.ಕೆ.ಪುರಂ,

# ದಂಡನೆ

ಕಥೆ



ಪುಣೆಯಿಂದ ಬೆಂಗಳೂರಿಗೆ ಹೊರಡುವ ಫ್ಲೈಟ್ ಹತ್ತಿ ನನ್ನ ಸೀಟ್ ಹತ್ತಿರ ಹೋಗಿ ನೋಡಿದರೆ ಅಲ್ಲಿ ಯಾರೋ ಕೂತಿದ್ದರು. "ಎಕ್ಸ್‌ಕ್ಯೂಸ್ ಮಿ... ಮೈ ಸೀಟ್" ಅಂದೆ. ನನ್ನತ್ತ ತಿರುಗಿದ ವ್ಯಕ್ತಿಯನ್ನು ನೋಡಿ ಆಶ್ಚರ್ಯ ಅಯಿತು. ವಿವೇಕ್ ಕಾಲೇಜಿನಲ್ಲಿ ನನ್ನ ಸೀನಿಯರ್. ಅವನು ನನ್ನನ್ನು ನೋಡಿ ಅಷ್ಟೆ ಆಶ್ಚರ್ಯಚಕಿತನಾಗಿದ್ದ ಅನಿಸುತ್ತೆ. "ಸಹನಾ ಅಲ್ವಾ? ಸ್ಸಾರಿ... ಸುಮ್ಮನೆ ಕೂತಿದ್ದೆ, ಬನ್ನಿ ನಿಮ್ಮ ಸೀಟಿಗೆ" ಅಂತ ಎದ್ದು ದಾರಿ ಬಿಟ್ಟ. "ಇದು ನನ್ನ ಸೀಟ್" ಅಂತ ಐಲ್ ಸೀಟಲ್ಲಿ ಕೂತ.

ವಿಮಾನ ಹೊರಡುವ ತಯಾರಿಯಲ್ಲಿ ಬಾಗಿಲು ಮುಚ್ಚಿದರು. "ಮಧ್ಯ ಸೀಟಿಗೆ ಯಾರು ಬರೊಲ್ಲ ಅನ್ಸುತ್ತೆ" ಅಂದ ವಿವೇಕ್. "ಹೌದು. ಆರಾಮಾಗಿ ಕೂತ್ಕೋಬಹುದು, ಇಲ್ಲಾ ಅಂದ್ರೆ ಕಿಷ್ಕಿಂದಾ" ಅಂದೆ. "ಹೌದು!" ಅಂತ ಮುಗುಳುನಕ್ಕ. "ಏನು ಬೆಂಗಳೂರು ಕಡೆ? ಈಗ ಎಲ್ಲಿರೋದು ನೀವು? ಗೊತ್ತಾಯ್ತ ನಾನು ಯಾರು ಅಂತ? ತುಂಬಾ ವರ್ಷ ಆಗಿದೆ ನೋಡಿ ಅದಕ್ಕೆ ಕೇಳಿದೆ" ಅಂದ. ನಾನೂ ನಿಧಾನಕ್ಕೆ "ಮಗ ಸುಹಾಸ್ ಮೆಡಿಸನ್ ಓದುತ್ತಿದ್ದಾನೆ ಬೆಂಗಳೂರಿನಲ್ಲಿ. ಅಮ್ಮಾ ... ಎಕ್ಸಾಮ್ ಟೈಮ್‌ನಲ್ಲಿ ನೀನಿದ್ದರೆ ಒಳ್ಳೇದು ಬಾ ಅಂದಿದ್ದ. ಅದಕ್ಕೆ ಈ ಪಯಣ. ನಾವು ಪುಣೆಯಲ್ಲಿ ಇರೋದು" ಅಂದೆ.

ಅವನು ಪ್ರತಿಕ್ರಿಯಿಸುತ್ತಾ "ಓಹ್... ನಿಮ್ಮ ಮಾವನವರು ಕೂಡ ವೈದ್ಯರಲ್ಲವೆ? ಡಾ॥ ಟಂಡನ್ ಪ್ರಸಿದ್ಧ ಮಾನಸಿಕ ತಜ್ಞರು ಅಪ್ಪನ ವೃತ್ತಿ ಮುಂದುವರಿಸದೆ ತಾತನ ವೃತ್ತಿನಾ?" ಅಂದ.

ಒಮ್ಮೆ ಅವನತ್ತ ನೋಟ ಹರಿಸಿದೆ ಇದೇನು ಇವನು ನನ್ನ ಬಗ್ಗೆ ಏನು ಮರೆತಿಲ್ಲ ಅಂತ. ಅವನ ಮಾತಿಗೆ ಉತ್ತರವಾಗಿ "ಹಾ ಇವನಪ್ಪನು ಅವರಪ್ಪನ ವೃತ್ತಿ ಮುಂದುವರಿಸಲಿಲ್ಲ. ಇವನೂ ಸಹ! ನಿಮ್ಮ ಮಕ್ಕಳು ಏನು ಮಾಡುತ್ತಾರೆ?" ಅಂದೆ. ಅದಕ್ಕವನು "ನನ್ನ ಮಗಳು ಡಿಗ್ರಿ ಮುಗಿಸಿ ಎಂಬಿಎ ಮಾಡುತ್ತಿದ್ದಾಳೆ. ಮಗ ಈಗ ಇಂಜಿನಿಯರ್ ಫಸ್ಟ್ ಇಯರ್... ಇಬ್ಬರು ಸ್ವಸ್ತರೆ" ಅಂದ. ಯಾಕೋ ಚಾಟೀಲಿ ಬಾರಿಸಿದ ಹಾಗೆ ಆಯಿತು. ಏನು ಹೇಳಲು ತೋಚದೆ ಮುಗುಳುನಕ್ಕೆ.

ಅವನೇ ಮುಂದುವರಿಸಿದ "ನನ್ನ ತಮ್ಮ ಹೋಗಿ ಹತ್ತು ವರ್ಷ ಆಯಿತು. ಇರೋ ತನಕ ಪದ್ಮ ಚೆನ್ನಾಗಿ ನೋಡಿಕೊಂಡಳು" ಅಂದ. "ಸರಿ" ಅಂತ ತಲೆ ಆಡಿಸಿದೆ. "ಓಕೆ... ಫ್ಲೈಟ್ ಲ್ಯಾಂಡ್ ಆಗೋ ತನಕ ಸ್ವಲ್ಪ ನಿದ್ದೆ ಮಾಡ್ತೇನೆ" ಅಂತ ಮುಖ ಆಕಡೆ ತಿರುಗಿಸಿ ಕಣ್ಣು ಮುಚ್ಚಿದ.

ನಾನು ಕಿಟಕಿಯಿಂದ ಆಚೆ ಮೋಡಗಳನ್ನು ನೋಡತೊಡಗಿದೆ. ಯಾಕೋ ನಂಬಿಕೆ ಆಗಲಿಲ್ಲ. ಇಷ್ಟು ವರ್ಷದ ಮೇಲೆ ವಿವೇಕ್ ಸಿಗುತ್ತಾನೆ ಅಂತ ಅನ್ಕೊಂಡೀರಲಿಲ್ಲ. ಯಾಕೋ ಮನಸು ಹಳೆಯದನ್ನು ಮೆಲಕು ಹಾಕಿತು.

****

ಆಗ ತಾನೆ ಇಂಜನಿಯರಿಂಗ್ ಮುಗಿಸಿದ್ದೆ. ಅಪ್ಪ ಅಮ್ಮ ಸಂಬಂಧಗಳ ಹುಡುಕಾಟದ ಬರದಲ್ಲಿದ್ದರು. ಮುಂದೆ ಓದಬೇಕು, ಕೆಲಸಕ್ಕೆ ಸೇರಬೇಕು ಎಂಬ ಕನಸಿಗೆಲ್ಲ ಬ್ರೇಕ್ ಹಾಕಿದ್ದರು. ಅಮ್ಮ "ಅದೆಲ್ಲ ಮದುವೆ ಆದ ಮೇಲೆ" ಎಂದು. ಅಪ್ಪ ಅಮ್ಮನ ಗರಡಿಯಲ್ಲೇ ಬೆಳೆದ ನಾನು ಎದುರು ಮಾತಾಡದೆ ಒಪ್ಪಿದೆ. ಎರಡು ಸಂಬಂಧಗಳನ್ನು ನೋಡಿ ನಿರ್ಧಾರ ಮಾಡುವುದು ಅಂತ ಆಗಿತ್ತು. ಒಂದು ಡಾ॥ ಟಂಡನ್ ಅವರ ಏಕೈಕ ಪುತ್ರ ಅಜಿತ್. ಮತ್ತೆ ಇನ್ನೊಂದು ನಮ್ಮ ದೂರದ ನೆಂಟರು ವಿಜಯಮ್ಮನ ಮಗ ವಿವೇಕ್.

ಇಬ್ಬರದೂ ಎಂಎಸ್ ಆಗಿತ್ತು. ಇಬ್ಬರೂ ಅಮೇರಿಕಾದಲ್ಲಿ ಸಾಫ್ಟ್‌ವೇರ್ ಇಂಜನಿಯರ್‌ಗಳು. ಅಜಿತ್ ಅವರು ಬಂದು ಹೋದ ಮಾರನೇ ದಿನವೇ ವಿವೇಕ್ ಬರೋದಿತ್ತು. ಅಜಿತ್ ಆಗಲೇ ಅಪ್ಪ, ಅಮ್ಮ, ಅಣ್ಣ, ಅತ್ತಿಗೆ ಎಲ್ಲರಿಗೂ ಇಷ್ಟವಾಗಿದ್ದ. "ನಮ್ಮ ಸಹನಾಗೆ ಸರಿ ಜೋಡಿ. ನಾಳೆ ವಿವೇಕ್ ಮನೆಯವರನ್ನು ನೋಡಿದ ಮೇಲೆ ಕೊನೆಯ ನಿರ್ಧಾರ!"

ವಿವೇಕ್ ಬಂದಿದ್ದ. ಅವನು ನನ್ನ ಕಾಲೇಜಿನಲ್ಲಿ ಸೀನಿಯರ್. ಅವನ ಅಮ್ಮ "ನಮ್ಮ ಮಗನಿಗೆ ನಿಮ್ಮ ಮಗಳು ಮೊದಲಿಂದಲೂ ಇಷ್ಟ. ಕಾಲೇಜಿನಲ್ಲಿ ನೋಡಿದ್ದನಂತೆ" ಅಂತ.

ಎಲ್ಲಾ ಮಾತು ಮುಗಿದ ಮೇಲೆ ವಿಜಯಮ್ಮ ಒಂದು ಮಾತು ಹೇಳಿದರು "ನಿಮಗೆ ಗೊತ್ತಿದೆಯೊ ಇಲ್ಲವೊ? ನನಗೆ ಇನ್ನೊಬ್ಬ ಮಗ ಇದ್ದಾನೆ. ವಿನೀತ್ ಅಂತ. ವಿವೇಕನಿಗಿಂತ ಐದು ವರ್ಷ ಚಿಕ್ಕವನು. ಅವನಿಗೆ ಮಾನಸಿಕ ವಿಕಾಸವಾಗಿಲ್ಲ. ಈಗಲೂ ಚಿಕ್ಕ ಮಗೂನೇ. ನಾನು ತಾಯಿ. ಏನೇ ಆಗಲಿ ಅವನು ನನ್ನ ಮಗ. ನಿಮ್ಮ ಮಗಳೇನು ಅವನನ್ನ ನೋಡ್ಕೋಬೇಕಿಲ್ಲ. ಆದರೂ ವಿಷಯ ಮುಚ್ಚಿಡಬಾರದು ಎಂದು ಹೇಳುತ್ತಿದ್ದೇನೆ" ಎಂದು ಹೇಳಿದರು.

ಇಬ್ಬರು ಬಂದು ಹೋಗಿ ಆಗಿತ್ತು. ನಿರ್ಧಾರ ಮಾಡುವ ಸ್ವಾತಂತ್ರ್ಯ ನನಗಿರಲಿಲ್ಲ. ಅಪ್ಪ ಅಮ್ಮನಿಗೆ ಬಿಟ್ಟಿದ್ದು. ಆದರೂ ಮನಸು "ವಿವೇಕನನ್ನೆ ಇವರು ಒಪ್ಪಲಿ" ಎನ್ನುತ್ತಿತ್ತು. ನಾನು ಅವನನ್ನ ಕಾಲೇಜಿನಲ್ಲಿ ಎರಡು ಮೂರು ಸಲ ನೋಡಿದ್ದೆ. ಒಂದೆರಡು ಸಲ ಮಾತು ಕೂಡ ಆಡಿದ್ದೆವು. ನನಗೆ ಇಷ್ಟಾಗಿದ್ದ.

ಆ ಸಂಜೆ ಅಪ್ಪ ನನ್ನ ಅಭಿಪ್ರಾಯ ಕೇಳಿದಾಗ ನಾನು ಧೈರ್ಯವಾಗಿ "ಅಪ್ಪ, ನನಗೆ ವಿವೇಕ್ ಇಷ್ಟ" ಅಂತ ಹೇಳಿದೆ. ತಕ್ಷಣವೇ ಚೀರಿದ ಅಮ್ಮ "ನಿನಗೆ ತಲೆ ಕೆಟ್ಟಿದ್ಯಾ? ಆ ಹುಚ್ಚನ್ನ ನೋಡ್ಕೊ ಬೇಕಾಗೊತ್ತೆ. ಅದೂ ಅಲ್ಲದೆ ನಾಳೆ ನಿನಗೆ ಹುಚ್ಚು ಮಕ್ಕಳು ಹುಟ್ಟಿದರೆ? ಇವೆಲ್ಲಾ ಜೆನೆಟಿಕ್ ಕಾಯಿಲೆಗಳು" ಎಂದು ಹೇಳಿದಾಗ ನನಗೆ ಭಯ ಆಯಿತು. "ಸರಿ, ನೀವು ಹೇಗೆ ಹೇಳ್ತೀರೊ ಹಾಗೆ!" ಎಂದು ನಿರ್ಧಾರ ಅವರಿಗೆ ಬಿಟ್ಟು ಬಿಟ್ಟೆ.

ಎಲ್ಲಾ ಸೇರಿ ಅಜಿತ್ ಜೊತೆ ಸಂಬಂಧ ಬೆಸೆಯುವುದು ಎಂದು ತೀರ್ಮಾನಿಸಿದರು. ಸ್ವಲ್ಪ ಹೊತ್ತಿನ ನಂತರ ನಾನು ಗೆಳತಿಯ ಮನೆಗೆ ಹೊರಟಾಗ ದಾರಿಯಲ್ಲಿ ವಿವೇಕ್ ಕಾಯುತ್ತಿದ್ದ. ನನ್ನ ನೋಡಿದೊಡನೆ ಎದುರು ಬಂದು ಕೈ ಹಿಡಿದ. "ನನಗೆ ನೀನು ಮೊದಲಿನಿಂದಲು ಇಷ್ಟ. ನಿನ್ನೇ ಮದುವೆ ಆಗ ಬೇಕೆಂದು ಕನಸು ಕಂಡಿದ್ದೆ" ಅಂದ. ನಾನು "ಕೈಬಿಡಿ. ನಮ್ಮಪ್ಪ ಅಮ್ಮ ಈ ಮದುವೆಗೆ ಒಪ್ಪಲಿಲ್ಲ. ಅದೂ ಅಲ್ಲದೆ ನನಗೆ ನಿಮ್ಮ ಹುಚ್ಚು ತಮ್ಮನ ಜೊತೆ ಬಾಳುವ ಕರ್ಮ ಬೇಡ" ಎಂದು ಕೈಬಿಡಿಸಿಕೊಂಡು ಓಡಿ ಹೋಗಿದ್ದೆ. ಇದೆಲ್ಲ ಕಳೆದು ಇಪ್ಪತ್ತೈದು ವರ್ಷ ಆಗಿತ್ತು.

****

ಫ್ಲೈಟ್ ಬೆಂಗಳೂರಿನಲ್ಲಿ ಲ್ಯಾಂಡ್ ಆಯಿತು. ಎಲ್ಲರಿಗೂ ಇಳಿಯುವ ಗಡಿಬಿಡಿ. "ನನ್ನದು ಬರೀ ಹ್ಯಾಂಡ್‌ಬ್ಯಾಗ್. ನಿಮ್ಮದು ಲಗೇಜ್ ಇದ್ಯೇನೊ?" ಅಂದ ವಿವೇಕ್. "ಹೌದು, ಇದೆ" ಎಂದು ತಲೆ ಆಡಿಸಿದೆ. "ಹೆಲ್ಪ್ ಬೇಕಾ?" ಅಂದ. "ಇಲ್ಲಾ... ಮ್ಯಾನೇಜ್ ಮಾಡ್ತೀನಿ" ಅಂದೆ. "ಓಕೆ ಹಾಗಾದ್ರೆ! ಬೈ... ಮತ್ತೆ ಸಿಗೋ ಯೋಗ ಇದ್ದರೆ ಭೇಟಿ ಆಗೋಣ" ಅಂದು ಹೊರಟ.

ಜೋರಾಗಿ ಚೀರ ಬೇಕೆನಿಸಿತು. ವಿವೇಕ್ ಪ್ರಸಿದ್ಧ ಮಾನಸಿಕ ತಜ್ಞರ ಮೊಮ್ಮಗ. "ನನ್ನ ಮೊದಲನೆ ಮಗ, ಸುಹಾಸ್‌ನ ಅಣ್ಣ ಶ್ರೇಯಸ್, ಹುಟ್ಟು ಮಾನಸಿಕ ರೋಗಿ. ಅವನಿಗೆ ಮನೋವಿಕಾಸವೇ ಇಲ್ಲ. ಇಂದಿಗೂ ಅವನು ಆರು ತಿಂಗಳ ಮಗು. ನಿನ್ನ ಬಗ್ಗೆ ನಿನ್ನ ತಮ್ಮನ ಬಗ್ಗೆ ನಾನು ಯೋಚಿಸಿದಕ್ಕೆ ಪ್ರಾಯಶಃ ಆ ಭಗವಂತ ನನಗೆ ಕೊಟ್ಟ ದಂಡನೆ!" ಎಂದು.

ಮಾತು ಗಂಟಲಲ್ಲೇ ಹೂತು ಹೋಯಿತು. ಮರೆಯಾಗುತ್ತಿದ್ದ ಅವನನ್ನೇ ಗಮನಿಸುತ್ತಾ ಬ್ಯಾಗೇಜ್ ಕಲೆಕ್ಟ್ ಮಾಡಲು ಹೊರಟೆ. ಅ

*ಸ್ನೇಹಾ ರಮಾಕಾಂತ್*

## ನಿಂತ ನೀರಾಗಿ ನಿಲ್ಲದೇ

ನಿಂತ ನೀರಾಗಿ ನಿಲ್ಲದೆ ಒಂದೆಡೆ
ಹಂತ ಹಂತವಾಗಿ ಹರಿದು ಎಲ್ಲೆಡೆ
ಸಂತಸದ ಗಾಳಿ ಕೊಂಡೊಯ್ದು ಜೊತೆ
ಆಗುವುದು ಈ ಜೀವಕೆ ಸಾರ್ಥಕತೆ ॥

ನಿಂತಾಗ ಒಂದೆಡೆ ಮುನ್ನೋಟಕ್ಕೆ ತಡೆ
ಸಂಕುಚಿತ ಮನ ಜಡಗೊಂಡ ತನು
ಬುದ್ಧಿಗೆ ಹಿಡಿಯಲು ಕೀಲು
ನಿನ್ನ ಸುದ್ಧಿಯಾಗುವುದು ಜೂಲು ॥

ಹರಿವ ನೀರಾಗಿ ಪಸರಿಸು ಸೊಂಪಾಗಿ
ಬೆಟ್ಟ–ಗುಡ್ಡ, ಹಳ್ಳ–ಕೊಳ್ಳ ತಾಣವಿರುವೆಡೆಯೆಲ್ಲಾ
ಸಿಂಪಡಿಸು ಚೇತನವ
ಸಂಭ್ರಮಿಸು ಜೀವನದಿ

ಉಪಕಾರಿಯಾಗಿ ಸಾಗು ಎಚ್ಚರಿಸುತ್ತಾ
ವೈವಿಧ್ಯತೆಯ ಆಸ್ವಾದಿಸುತ್ತಾ
ನಿನ್ನ ನೀ ಅರ್ಪಿಸುತ ಒಮ್ಮತವ ಸಾರುತ್ತ
ವಿಶಾಲ ಸಾಗರದತ್ತ

ಜಾತಿ–ಕೋಮುಗಳ ಕೆಸರಲಿ ಕುಸಿಯದೆ
ಮಾನವತೆಯ ಪರಿಮಳವ ಸೂಸುತ್ತ
ನಿಂತನೀರಾಗಿ ನಿಲ್ಲದೆ ಒಂದೆಡೆ
ಹರಿವ ನೀರಾಗಿ ಸಾಗು ನೀ ಎಲ್ಲೆಡೆ

***ಕಲಾಚಾರಿ, ಗುರ್‌ಗಾಂವ್***

## ಮರೀಚಿಕೆ

ಬದುಕೊಂದು ಪಯಣ
ನಿರಂತರ ಅಲೆದಾಟ
ಕ್ಷಣಕ್ಷಣವೂ ಹೊಸತನ
ಕಲಿತದನ್ನು ಮರೆಯುವ
ದಿಗಂತದಾಚೆಗೆ ಇಣುಕುವ
ಅರಿವಿಲ್ಲದ ಹುಡುಕಾಟ
ಅಪ್ಪ–ಅಮ್ಮ ಗುರು–ದೇವರು
ನೆರೆಹೊರೆ ಸ್ನೇಹಿತ ಸಂಬಂಧ
ಸುಖ–ದುಃಖ, ಪಾಪ–ಪುಣ್ಯ
ಪ್ರೀತಿ–ಪ್ರೇಮ, ಮಧ–ಮತ್ಸರ
ಕೊಡು–ಕೊಳ್ಳುವ ಪೊಳ್ಳು ವ್ಯಪಾರ
ಉತ್ತರ–ದಕ್ಷಿಣ, ಸಾಗರ – ಹಿಮಾಲಯ
ಅನುದಿನವು ಅನುಭವಗಳು
ಹಸಿವು–ಬಾಯಾರಿಕೆ, ಕಾಮ–ಕ್ರೋಧ
ಹೊಡೆದಾಟ–ಬಡಿದಾಟ ಚಿಂತೆ–ಚೀರಾಟ
ಎಲ್ಲಾ ಡೊಂಬರಾಟ ಮುಗಿದು
ಮಣ್ಣಾಗುವ ಮರೀಚಿಕೆ

***ಸಖಾರಾಮ ಉಪ್ರೂರು***

## ಹಗುರ ಪಯಣ ಭಾರವು ಮನ!

ಆಗಸದ ಪಯಣ ಸುಖಮಯವೆಂಬೋಣ
ಸೇರುವೆವು ದೂರದ ಊರ
ಬಿರಬಿರನೆ ಏಣೇಣದಿ
ಪಯಣದುದ್ದಕ್ಕೂ "ಅಬ್ಬಬ್ಬ ಖರ್ಚಾಯಿತಲ್ಲಪ್ಪ"
ಎಂದು ಮಿಡುಕುವುದು ಮನ ॥

ಅಡ್ವಾನ್ಸ್ ಬುಕ್ಕಿಂಗು ಏಳೆಂಟು ಸಾವಿರಕೆ
ಅವಸರದಿ ಪಯಣಿಸೆ ಕೇಳಲೇಬೇಡಿ
ಹನ್ನೆರಡು ಸಾವಿರಕೆ ಕಡಿಮೆ ಇಲ್ಲ ನೋಡಿ !
ಈ ದಿಲ್ಲಿ–ಬೆಂಗಳೂರಿಗೆ ಗಾಡಿ ॥

ನೋಡಿ ನೋಡಿ ಲಗೇಜು ಪ್ಯಾಕು ಮಾಡಿ
ಆಗದಿರಲಿ ಗರಿಷ್ಟ ಹದಿನೈದು ಕೆ.ಜಿ.
ತಲೆಯಲ್ಲಿ ಕೈಇಟ್ಟ ಪೆಟ್ಟಿಗೆಯ ಮುಂದೆ ಕುಳಿತು
ಎಕ್ಸಟ್ರಾ ಹಣ ಕಟ್ಟುವ ಕಹಿಚಿಂತೆ ಹೊತ್ತು !

ಸೀರೆಗಳ ತೂಕನೋಡಿ ಒಳಗಿಟ್ಟು
ಭಾರವ ಹೊರತೆಗೆದು ಹಗುರವ ಹುಡುಕಿಟ್ಟು
ಈ ತಡಕಾಟದಲಿ ಮುಖ್ಯವನ್ನೇ ಮರೆತು
ಹದಿನೈದು ಕೆ.ಜಿ.ಯ ಲೆಕ್ಕ ಕೀಟದಂತೆ ಕಾಡಿತ್ತು

ಯಾಕೆ ಬೇಕಿತ್ತಪ್ಪ ಈ ಹಾರುವ ಹುಚ್ಚು
ರೈಲೇ ಸಾಕಿತ್ತಲ್ಲವೇನು
ಸುಖವಾಗಿ ಹೊತ್ತು
ನಾಲ್ಕು ಪೆಟ್ಟಿಗೆ ನಾಲ್ಕು ಕಿಟ್ಟು!

***ಕಲಾಚಾರಿ, ಗುರ್‌ಗಾಂವ್***



# ಅಕ್ಷರ ಗುರು


ಮರದ ದಿಮ್ಮಿಯೊಂದು ಬೆಟ್ಟದ ಮೇಲಿನಿಂದ ಉರುಳಿದನ್ನು ಮೊದಲ ಸಲ ನೋಡಿದಾಗ ಏನೂ ಅನಿಸಿರಲಿಲ್ಲ. ಮತ್ತೊಮ್ಮೆ ಅಂತಹದೇ ಆದಾಗ ಕುತೂಹಲ ಉಂಟಾಯಿತು. ಮನುಷ್ಯ ಜೀವಿ ಉಳಿದ ಪ್ರಾಣಿಗಳಿಗಿಂತ ಭಿನ್ನವಾಗಿ ಯೋಚಿಸಿ, ಉರುಳುತ್ತಿರುವುದು ಚಕ್ರವಾಗಬಹುದು ಎಂದು ಅರಿತುಕೊಂಡಿತು. ಆಕಸ್ಮಿಕವಾಗಿ ಉಂಟಾದ ಘರ್ಷಣೆಯಿಂದ ಬೆಂಕಿ ಹುಟ್ಟಿದಾಗ, ಅದರಲ್ಲಿ ಬೆಂದ ಆಹಾರ ಹೆಚ್ಚು ರುಚಿಯಾದಾಗ ಬೆಂಕಿ ಕೂಡಾ ಬದುಕಿಗೆ ಬೇಕು ಅನಿಸಿತು. ತನಗೆ ದೊರೆತ ಇಂತಹ ಅರಿವುಗಳನ್ನು ಇತರರಿಗೆ ತಿಳಿಸಲೆಂದು ಸಿಕ್ಕಿದೆಡೆ ಗೀಚಿದಾಗ ಅಕ್ಷರಗಳು ಮೂಡಿದವು. ಉಳಿದವರೂ ಅಂತಹ ಅಕ್ಷರಗಳನ್ನು ಅರ್ಥಮಾಡಿದಾಗ ಅರಿವು ಮೂಡಿತು. ಇಂತಹ ಅರಿವನ್ನು ಮನುಕುಲದ ಒಳಿತಿಗೂ ಬಳಸಬಹುದು, ನಾವಿರುವ ಜಗತ್ತಿನ ನಾಶಕ್ಕೂ ಮೂಲವಾಗಬಹುದು. ಹಳೆಯ ಅರಿವುಗಳನ್ನು ಅರ್ಥಮಾಡುತ್ತಾ, ಅದರೊಳಗಿನ ಒಗಟುಗಳನ್ನು ಬಿಡಿಸುತ್ತಾ, ತರ್ಕಗಳಿಂದ ವಿವೇಚಿಸುತ್ತಾ ಹೊಸ ಬದುಕನ್ನು ಹುಡುಕುತ್ತೇವೆ.

ಒಂದು ಘಟ್ಟದಲ್ಲಿ ತಮ್ಮ ಓದಿನ ಮತ್ತು ಬದುಕಿನ ಅನುಭವಗಳಿಂದ ಬರೆದ ಸಾಹಿತ್ಯದ ರೂಪಕಗಳಲ್ಲಿ ಚಿಂತನೆಗೆ ಹೊಸ ರೂಪಗಳನ್ನು ನೀಡಿ, ಇನ್ನೊಂದು ಹಂತದಲ್ಲಿ ವಿಚಾರಗಳನ್ನು ನೇರವಾಗಿ ತಮ್ಮ ಭಾಷಣಗಳಲ್ಲಿ ಮತ್ತು ಅಂಕಣಗಳಲ್ಲಿ ಬರೆದ ಅನಂತಮೂರ್ತಿಯವರು ತಮ್ಮ ವಿಚಾರಗಳ ಸನಿಹಕ್ಕೆ ಬಂದವರಿಗೆಲ್ಲರಿಗೂ ಮೆಚ್ಚಿನ ಮೇಸ್ಟ್ರಾದರು. ಸಾಹಿತ್ಯ ಮತ್ತು ಚಿಂತನೆಗಳ ಮೂಲಕ ಅವರು ಕನ್ನಡದ ಅನನ್ಯತೆಯನ್ನು ದೇಶದಲ್ಲಿ ಮಾತ್ರವಲ್ಲ ಜಗತ್ತಿನಲ್ಲೂ ಪರಿಚಯಿಸಿದರು.

ಅವರಿಲ್ಲವಾದಾಗ ಅವರೊಂದಿಗಿನ ಅಪರೂಪದ ಕ್ಷಣಗಳ ಮೆಲುಕನ್ನು ಅಭಿಮತದ ಈ ಸಂಚಿಕೆಯಲ್ಲಿ ಈಗಷ್ಟೇ ಓದಿದ ನೀವು ಅವರ ಸಾಹಿತ್ಯಕೃತಿಗಳನ್ನು ದೆಹಲಿ ಕರ್ನಾಟಕ ಸಂಘದ ಗ್ರಂಥಾಲಯದಿಂದ ಪಡೆಯಬಹುದು. ತನ್ನ ಅರಿವಿನ ಪರಿಧಿಯೊಳಗೆ ತನ್ನ ವಿವೇಚನೆಗೆ ಸರಿಯೆನಿಸಿದುದನ್ನು ತಮ್ಮ ತರ್ಕಗಳ ಮೂಲಕ ವ್ಯಕ್ತಪಡಿಸಲು ಅವರು ತೋರಿಸಿದ ಧೈರ್ಯ ನಮಗೆ ಬೆಳಕು ಕೊಡುವ ಪಂಜು ಆಗಲಿ. ಅ

ಬಾನಾಡಿ

*ಬಾಲಕೃಷ್ಣ ನಾಯ್ಕ್ ಡಿ.*



## ಓದುಗರ ಪತ್ರ




ಆಗಸ್ಟ್ ತಿಂಗಳ ಅಭಿಮತ ಬಂದಿದೆ. ಅಧ್ಯಕ್ಷರ ನೇರ ಮಾತು ಸಕಾಲಿಕವಾಗಿದೆ. 'ರಾಜಧಾನಿಯಲ್ಲಿ ಕರ್ನಾಟಕದ ಧ್ವನಿ ದುರ್ಬಲವಾಗಿದೆ. ಅದು ಸಶಕ್ತವಾಗಲು ಕನಿಷ್ಟ ಪಕ್ಷ ರಾಜ್ಯವನ್ನು ರಾಜಧಾನಿಯಲ್ಲಿ ಪರಿಣಾಮಕಾರಿಯಾಗಿ ಮಂಡಿಸುವ, ಅದರ ಹಿತಕ್ಕಾಗಿ ಹೋರಾಡುವ ಜನಪ್ರತಿನಿಧಿಗಳನ್ನು ಆರಿಸಿ ಕಳಿಸುವ ಕೆಲಸವನ್ನು ಕನ್ನಡಿಗರು ಮಾಡಬೇಕು' ಎಂದು ಈ ಹಿಂದೆ ಸಲಹೆ ನೀಡಿದ ಡಾ. ಬಿಳಿಮಲೆ ಅವರ ಮಾತುಗಳನ್ನು ಪುನರುಚ್ಚರಿಸಿದ್ದೀರಿ. ನಿಜ. ಆದರೆ, ರಾಜ್ಯದ ಹಿತ ಕಾಯುವ ಜನಪ್ರತಿನಿಧಿಗಳನ್ನು ಆರಿಸುವ ಅವಕಾಶವನ್ನು ರಾಷ್ಟ್ರೀಯ ಪಕ್ಷಗಳು ಕನ್ನಡಿಗರಿಗೆ ನೀಡಿದರೆ ತಾನೆ ಆರಿಸಿ ಕಳಿಸುವುದು. ಅವುಗಳು ತಂತಮ್ಮ ಪಕ್ಷಗಳ ಹಿತವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಇರುತ್ತಾರೆ. ಅದು ಬರ ಬರುತ್ತ ಇನ್ನಷ್ಟು, ಮತ್ತಷ್ಟು ಗೋಜಲಿಗೆ ದಾರಿ ಮಾಡಿ ಕೊಡುತ್ತಿದೆ. ಆದ್ದರಿಂದ ಸಧ್ಯ ಅದನ್ನು ಅಪೇಕ್ಷಿಸುವುದು ಕನ್ನಡಿಗರಿಗೆ ದೂರದ ಕನಸು ಎಂದು ನನ್ನ ಭಾವನೆ.

ಡಾ. ಬಿಳಿಮಲೆ ಅವರು ಈ ಮಾತಿನೊಂದಿಗೆ ಇನ್ನೊಂದು ಮಾತನ್ನು ಹೇಳಿದ್ದರು. ಅದು ಅವರ ಪುಸ್ತಕದಲ್ಲಿ ಬಂದಿದೆಯೋ ಇಲ್ಲವೊ ಗೊತ್ತಿಲ್ಲ. ಬಹಳ ದಿನಗಳ ಹಿಂದೆ ಈ ಕುರಿತು ಚರ್ಚಿಸುತ್ತಿರುವಾಗ, ಜನಪ್ರತಿನಿಧಿಗಳು ಯಾರೇ ಆಯ್ಕೆಯಾಗಿ ಬರಲಿ. ಅವರಿಗೆ ರಾಜ್ಯದ ಸಮಸ್ಯೆಗಳನ್ನು, ವಿಶೇಷವಾಗಿ ನೆಲ, ಜಲ ಮತ್ತಿತರ ಜ್ವಲಂತ ಸಮಸ್ಯೆಗಳ ಬಗ್ಗೆ ತಿಳಿಸಿಕೊಡುವ ಒಂದು ಪುಟ್ಟ ಸಮಿತಿ, ಅದು ಮೂರು ಜನ ತಜ್ಞರ ಸಮಿತಿಯಾಗಿರಬೇಕು. ಅವರು ಅಧಿವೇಶನದ ಮುನ್ನ ಸಂಸದರಿಗೆ ಸಮಸ್ಯೆಗಳ ಅರಿವು ಮಾಡಿಕೊಟ್ಟು, ಆ ಕುರಿತು ದನಿ ಎತ್ತಲು ಸಹಾಯ ಮಾಡಬೇಕು. ಜೊತೆಗೆ ರಾಜ್ಯದಿಂದ ನೇಮಕವಾದ ಸಚಿವ ಮಟ್ಟದ ದೆಹಲಿ ಪ್ರತಿನಿಧಿಗಳೊಂದಿಗೂ ನಿರಂತರ ಸಂಪರ್ಕದಲ್ಲಿರಬೇಕು. ಇಂಥ ವ್ಯವಸ್ಥೆಯನ್ನು ಬೇರೆ ರಾಜ್ಯದವರು ಮಾಡಿದ್ದಾರೆಂತಲೂ ಹೇಳಿದ್ದರು. ಅದು ಸಾಧ್ಯವಾದರೆ ಪರಿಸ್ಥಿತಿ ತುಸು ಸುಧಾರಿಸಲು ಸಾಧ್ಯವಿದೆ.

ಅದೇನಿದ್ದರೂ ದೂರದ ದೆಹಲಿಯಲ್ಲಿದ್ದುಕೊಂಡು ರಾಜ್ಯದ ಬಗ್ಗೆ ನೀವುಗಳು ಚಿಂತಿಸುವ ಪರಿ, ಆರು ಚಿಲ್ಲರೆ ಕೋಟಿ ಕನ್ನಡಿಗರ ಅಭಿನಂದನೆಗೆ ಪಾತ್ರರಾಗಿದ್ದೀರಿ. ನಿಮ್ಮ ನೇರ ಮಾತುಗಳು ರಾಜ್ಯದ ಸಂಸದರಿಗೆ ಮುಟ್ಟಲಿ ಎಂದು ಅಶಿಸುವೆ. ಇದು ಮುಂದುವರಿಯಲಿ. ಅ

*ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ*

*ಬಿಜಾಪುರ*

## ದೆಹಲಿಯಲ್ಲಿ ತಮಟೆ ಪ್ರದರ್ಶನ

ದೆಹಲಿ ಕರ್ನಾಟಕ ಸಂಘವು ಆಗಸ್ಟ್ 29 ರಿಂದ 31ರವರೆಗೆ ಆಯೋಜಿಸಿದ ಗಣೇಶ ಸಾಂಸ್ಕೃತಿಕ ಉತ್ಸವದಲ್ಲಿ ಈ ಭೂಮಿ ತಮಟೆ ಕಲಾ ತಂಡ, ಮಾಲೂರು ಕಲಾವಿದರು ತಮಟೆ ವಾದನ ಹಾಗೂ ಸಾಂಸ್ಕೃತಿಕ ಲೋಕದ ಸದ್ದು ಕಾರ್ಯಕ್ರಮವನ್ನು ನೀಡಿ ದೆಹಲಿ ಕನ್ನಡಿಗರನ್ನು ರಂಜಿಸಿದರು.

ಈ ಕಲಾವಿದರು ಅಶೋಕ್ ವಿಹಾರ್, ಗಣೇಶೋತ್ಸವ ಗೆಳೆಯರ ಬಳಗ, ಫೇಸ್–1, ಆರ್.ಕೆ.ಪುರಂ, ಕರ್ನಾಟಕ ಭವನ ಎಂಪ್ಲಾಯಿಸ್ ರೆಸಿಡೆನ್ಸ್ ವೆಲ್ ಫೇರ್ ಅಸೋಸಿಯೇಶನ್, ಫೇಸ್–2, ಆರ್.ಕೆ.ಪುರಂನಲ್ಲಿ ಗಣೇಶೋತ್ಸವ ಸಂದರ್ಭದಲ್ಲಿ ಕಾರ್ಯಕ್ರಮವನ್ನು ನೀಡಿದರು. ಅ





**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com
PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
Sept - 2014, Vol. No.24, Issue No.12, Price Rs.1/- RNI Regn. No. 53405/91, DL-SW-1/4016/13-15
Printout Date : Sept 8th / 9th, Postal Date :10th / 11th, Total Pages-24

**KBL TRAVEL CARD**

Double your holiday excitement!




- Safe and easy way to use and carry your foreign exchange
- Accepted worldwide at over 1.6 million ATMs, 25 million merchant outlets and all websites verified by VISA

**KBL GIFT CARD**

A great way to gift your loved one




- Card available in denominations starting from ₹ 500/- to ₹ 25,000/-
- Freedom for the beneficiary to choose the gift
- Shop, dine & purchase online

Conditions apply

SCAN THIS QR CODE FOR MORE DETAILS

Call Toll Free No. 1800 425 1444 or Step into your nearest branch for details

Karnataka Bank Ltd.
Your Family Bank. Across India.

Regd. & Head Office: Mangalore - 575 002 CIN: L85110KA1924PLC001128 E-mail: info@ktkbank.com Visit us at: www.karnatakabank.com

Editor: Balakrishna Naik D., Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770